بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللهُ بِبَدْرٍ وَّاَنْتُمْ اَذِلَّةٌ

ವರ್ಷ: 06

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 40

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

02 ಅಕ್ಟೋಬರ್ 2025, 02 ಅಖಾ 1404 ಹಿಜರಿ ಶಮ್‌ಸಿ,
09 ರಬೀಉಸ್ಸಾನಿ 1447 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اِنَّ الَّذِيْنَ اٰمَنُوْا
وَعَمِلُوا الصّٰلِحٰتِ
لَهُمْ اَجْرٌ غَيْرُ مَمْنُوْنٍ ۹

﴿سُوْرَةُ حٰمٓ السَّجْدَة:۹﴾

(ಹಾಮ್ ಮೀಮ್ ಅಸ್ಸಜದಃ: 09)

ಅಂದರೆ: ಯಾರು ವಿಶ್ವಾಸ ಹೊಂದಿ ಸತ್ಕರ್ಮನಿರತರಾಗಿರುತ್ತಾರೋ, ಖಂಡಿತವಾಗಿಯೂ ಅವರಿಗೆ ಅಂತ್ಯಗೊಳ್ಳದ ಪ್ರತಿಫಲ ಲಭಿಸುವುದು

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನು ತನ್ನ ಪ್ರಜೆಯ ಬಗ್ಗೆ ಪ್ರಶ್ನಿಸಲಾಗುವನು.

**(2409)** ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ನುಡಿಯುತ್ತಾರೆ: ನಿಮ್ಮ ಪೈಕಿ ಆಡಳಿತ ಹೊಂದಿರುವ ಪ್ರತಿಯೊಬ್ಬ ಆಡಳಿತಗಾರನಲ್ಲಿ ತನ್ನ ಪ್ರಜೆಗಳ ಬಗ್ಗೆ ಪ್ರಶ್ನಿಸಲಾಗುವುದು. ರಾಜನಾದವನು ಆಡಳಿತ ಹೊಂದಿರುತ್ತಾನೆ. ಆದುದರಿಂದ ಅವನು ಪ್ರಜೆಗಳ ಬಗ್ಗೆ ಪ್ರಶ್ನಿಸಲ್ಪಡುವನು. ಅಂತೆಯೇ ಪ್ರತಿಯೊಬ್ಬ ಮನುಷ್ಯನು ತನ್ನ ಮನೆಯ ಯಜಮಾನ ಆಡಳಿತಗಾರನಾಗಿರುತ್ತಾನೆ. ಆದುದರಿಂದ ಅವನಿಂದಲೂ ಅವನ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವನು. ಮಹಿಳೆಯೂ ಸಹ ತನ್ನ ಪತಿಯ ಮನೆಯಲ್ಲಿ ಆಡಳಿತ ಹೊಂದಿರುತ್ತಾಳೆ. ಆದುದರಿಂದ ಅವಳಿಂದಲೂ ಅವಳ ಪ್ರಜೆ (ಕುಟುಂಬ)ದ ಬಗ್ಗೆ ಪ್ರಶ್ನಿಸಲ್ಪಡುವಳು. ಮನೆಯ ಸೇವಕನು (ನೌಕರನು) ಸಹ ಸಂಪತ್ತಿನ ರಕ್ಷಣೆಗೊಸ್ಕರ ಜವಾಬ್ಧಾರನಾಗಿರುತ್ತಾನೆ. ಅವನೂ ಸಹ ಈ ಪೈಕಿ ಪ್ರಶ್ನಿಸಲ್ಪಡುವನು. (ಹಝ್ರತ್ ಇಬ್ನು ಉಮರ್(ರ) ಹೇಳಿದರು. ನಾನು ರಸೂಲುಲ್ಲಾಹ್(ಸ) ಅವರಿಂದ ಇವೆಲ್ಲ ಜನರ ಪೈಕಿ ಆಲಿಸಿರುತ್ತೇನೆ. ಮತ್ತು ನನ್ನ ಭಾವನೆಯಾಗಿದೆ. ನಬಿ(ಸ) ಹೀಗೂ ನುಡಿದಿದ್ದರು. ಮನುಷ್ಯನು ತನ್ನ ತಂದೆಯ ಸಂಪತ್ತಿಗೂ ಜವಾಬ್ಧಾರನಾಗಿದ್ದಾನೆ. ಅವನೂ ಸಹ ಎಂದರೆ ಆ ಸಂಪತ್ತಿನ ಪೈಕಿ ಪ್ರಶ್ನಿಸಲ್ಪಡುವನು. ಆದುದರಿಂದ ನಿಮ್ಮ ಪೈಕಿ ಪ್ರತಿಯೊಬ್ಬನು ಜವಾಬ್ಧಾರನಾಗಿದ್ದಾನೆ. ಅವನು ತಮ್ಮ ಪ್ರಜೆ (ಸಂಪತ್ತಿನ ರಕ್ಷಣ) ಗಳ ಕುರಿತು ಪ್ರಶ್ನಿಸಲ್ಪಡುವನು. **(ಸಹೀಹ್ ಬುಖಾರಿ, ಸಂಪುಟ-4, ಕಿತಾಬುಲ್ ಇಸ್ತಿಗ್‌ರಾಝ್, 2008 ಖಾದಿಯಾನ್)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**

ಇಸ್ತಿಗ್‌ಫಾರ್ (ಕ್ಷಮೆ) ಅನ್ನು ಬಹಳಷ್ಟು ಯಾಚಿಸಿರಿ, ಇದರೊಂದಿಗೆ, ಪಾಪಗಳನ್ನು ಕ್ಷಮಿಸಲಾಗುತ್ತದೆ, ಸರ್ವಶಕ್ತನಾದ ಅಲ್ಲಾಹನು ಸಂತಾನವನ್ನು ಸಹ ನೀಡುವನು

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ಇಸ್ತಿಗ್‌ಫಾರ್ (ಕ್ಷಮೆ) ಮತ್ತು ದೃಢವಿಶ್ವಾಸ

❁ ಒಬ್ಬ ವ್ಯಕ್ತಿಯು ಹುಝೂರ್ ಅವರನ್ನು ನನಗೆ ಸಂತಾನಪ್ರಾಪ್ತವಾಗಲಿ ಎಂದು ಪ್ರಾರ್ಥಿಸಲು ಕೇಳಿಕೊಂಡನು. ಅವರು(ಅಲೈಹಿಸ್ಸಲಾಮ್) ಹೇಳಿದರು:

"ಇಸ್‌ತಿಗ್‌ಫಾರ್ ಅನ್ನು (ಕ್ಷಮೆಯನ್ನು) ಬಹಳಷ್ಟು ಯಾಚಿಸಿರಿ. ಇದರೊಂದಿಗೆ, ಪಾಪಗಳನ್ನು ಕ್ಷಮಿಸಲಾಗುತ್ತದೆ, ಸರ್ವಶಕ್ತನಾದ ಅಲ್ಲಾಹನು ಮಕ್ಕಳನ್ನು ಸಹ ನೀಡುತ್ತಾನೆ. ನೆನಪಿಡಿ, ದೃಢವಿಶ್ವಾಸವು ಒಂದು ಮಹತ್ತಾದ ವಿಷಯವಾಗಿದೆ. ಯಾರು ವಿಶ್ವಾಸದಲ್ಲಿ ಪರಿಪೂರ್ಣರೋ, ಸರ್ವಶಕ್ತನಾದ ಅಲ್ಲಾಹನು ಸ್ವತಃ ಅವನಿಗೆ ಸಹಾಯ ಮಾಡುತ್ತಾನೆ."

❁ ಒಬ್ಬ ಪರೀಕ್ಷಿಸಲ್ಪಡುತ್ತಿರುವ ವ್ಯಕ್ತಿಯ ಬಗ್ಗೆ ದುಆಗಾಗಿ ಕೇಳಲಾಯಿತು, ಅದಕ್ಕೆ ಅವರು(ಅಲೈಹಿಸ್ಸಲಾಮ್) ಹೇಳಿದರು: "ದುಆ ಮಾಡಲಾಗುತ್ತದೆ, ಆದರೆ ಕೆಲವೊಮ್ಮೆ ಸರ್ವಶಕ್ತನಾದ ಅಲ್ಲಾಹನು ಒಬ್ಬ ವ್ಯಕ್ತಿಗೆ ಬೇರೆ ಯಾವುದಾದರೂ ಅನುಗ್ರಹವನ್ನು ಕಾಯ್ದಿರಿಸಿರುತ್ತಾನೆ ಮತ್ತು ದುಆ ಸ್ಪಷ್ಟ ಪದಗಳಲ್ಲಿ ನೆರವೇರುತ್ತದೆ ಎಂದು ಕಾಣುವುದಿಲ್ಲ, ಅದರಲ್ಲಿ ಒಂದು ಪರೀಕ್ಷೆ ಇರುತ್ತದೆ. ವಿಶೇಷವಾಗಿ ಒಳ್ಳೆಯವರಾಗಿರುವ ಜನರಿಗೆ, ಏಕೆಂದರೆ ಅವರು ನಾವು ತುಂಬ ಒಳ್ಳೆಯವರಾಗಿದ್ದೇವೆ ಆದರೂ ಈ ಪರೀಕ್ಷೆ ನಮ್ಮ ಮೇಲೆ ಏಕೆ ಬಂತು? ಎಂದು ಭಾವಿಸುತ್ತಾರೆ."

### ಸರ್ವಶಕ್ತನಾದ ಅಲ್ಲಾಹನಲ್ಲಿ ದೃಢವಿಶ್ವಾಸವಿಡಿ

❁ ಅವರು(ಅಲೈಹಿಸ್ಸಲಾಮ್) ಹೇಳಿದರು: "ನಾವು ಅಲ್ಲಾಹನಲ್ಲಿ ಎಷ್ಟು ದೃಢ ವಿಶ್ವಾಸವಿದೆ ಎಂದರೆ ನಾವು ನಮಗಾಗಿಯೂ ಪ್ರಾರ್ಥಿಸುವುದಿಲ್ಲ, ಏಕೆಂದರೆ ಅವನು ನಮ್ಮ ಪರಿಸ್ಥಿತಿಯನ್ನು ಚೆನ್ನಾಗಿ ಬಲ್ಲವನಾಗಿದ್ದಾನೆ. ಅವಿಶ್ವಾಸಿಗಳು ಹಝ್ರತ್ ಇಬ್ರಾಹಿಂ(ಅಲೈಹಿಸ್ಸಲಾಮ್) ಅವರನ್ನು ಬೆಂಕಿಗೆ ಎಸೆದಾಗ, ದೇವದೂತರು ಬಂದು ಹಝ್ರತ್ ಇಬ್ರಾಹಿಂ(ಅಲೈಹಿಸ್ಸಲಾಮ್) ಅವರಿಗೆ ಏನಾದರೂ ಅಗತ್ಯವಿದೆಯೇ ಎಂದು ಕೇಳಿದರು. ಹಝ್ರತ್ ಇಬ್ರಾಹಿಂ(ಅಲೈಹಿಸ್ಸಲಾಮ್) ಹೇಳಿದರು, **ಬಲಾ- ವಲಾಕಿನ್ ಇಲೈಕುಮ್ ಲಾ** "ಹೌದು ಇದೆ, ಆದರೆ ನಾನು ಅದನ್ನು ನಿಮಗೆ ಪ್ರಸ್ತುತಪಡಿಸುವ ಅಗತ್ಯವಿಲ್ಲ." ಅದಕ್ಕೆ ದೇವದೂತರು ಹೇಳಿದರು, "ಸರಿ, ಹಾಗಾದರೆ ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸಿ." ನಂತರ ಹಝ್ರತ್ ಇಬ್ರಾಹಿಂ(ಅಲೈಹಿಸ್ಸಲಾಮ್) ಹೇಳಿದರು, **ಇಲ್‌ಮುಹೂ ಮಿನ್ ಹಾಲೀ ಹಸ್ಬೀ ಮಿನ್ ಸವಾಲೀ-** ಅವನು (ಅಲ್ಲಾಹನು) ನನ್ನ ಪರಿಸ್ಥಿತಿಯ ಬಗ್ಗೆ ಎಷ್ಟು ತಿಳಿದಿದ್ದಾನೆಂದರೆ ನಾನು ಕೇಳುವ ಅಗತ್ಯವಿಲ್ಲ."

**(ಮಲ್‌ಫೂಝಾತ್, ಸಂಪುಟ 2, ಪುಟಗಳು 89, 91, ಆವೃತ್ತಿ 2018, ಖಾದಿಯಾನ್)**

## 130ನೇ ಜಲ್ಸಾ ಸಾಲಾನ ಖಾದಿಯಾನ್ 26, 27, 28 ಡಿಸೆಂಬರ್ 2025ರಂದು ಆಯೋಜಿಸಲಾಗುವುದು

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 130ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 26, 27 ಮತ್ತು 28ನೇ ಡಿಸೆಂಬರ್ 2025 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಮರ್ಕಝಿಯ ಖಾದಿಯಾನ್)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

# ಖುತ್‌ಬ ಜುಮುಅ

ಮಕ್ಕಾ ವಿಜಯದ ನಂತರ ತಕ್ಷಣವೇ, ಜನರ ಹೃದಯಗಳಿಂದ ವಿಗ್ರಹಗಳ ಕಲ್ಪಿತ ಭಯವನ್ನು ನೀಗಿಸಲಿಕ್ಕಾಗಿ ವಿಗ್ರಹಗಳ ಸ್ಥಳಗಳನ್ನು ನಾಶಪಡಿಸಲು ಹಝ್ರ್‌ರತ್ ಪೈಗಂಬರ್(ಸ) ಆದೇಶಿಸಿದರು, ಇದರಿಂದಾಗಿ ಅವರ ಭಯ ಮತ್ತು ಶ್ರೇಷ್ಠತೆಯ ಕಲ್ಪನೆಯು ಜನರ ಹೃದಯದಿಂದ ಕಣ್ಮರೆಯಾಗುತ್ತದೆ, ಮತ್ತು ಈ ಯುಕ್ತಿವುಳ್ಳ ನಿರ್ಧಾರವು ತುಂಬಾ ಅನುಗ್ರಹದಾಯಕವಾಗಿತ್ತು ಏಕೆಂದರೆ ಅದರ ಧ್ವಂಸವು ಅವರ ಸುಳ್ಳು ಭಯ ಮತ್ತು ವಿಸ್ಮಯವನ್ನು ಜನರ ಹೃದಯದಿಂದ ತೆಗೆದುಹಾಕಿತು ಮತ್ತು ಹಝ್ರ್‌ರತ್ ಪೈಗಂಬರ್(ಸ)ರು ಪ್ರಸ್ತುತಪಡಿಸಿದ ಏಕದೇವೋಪಾಸನೆಯ ಪರಿಕಲ್ಪನೆಯು ಸರಿಯಾಗಿದೆ ಎಂದು ನಂಬಲು ಪ್ರಾರಂಭಿಸಿದರು.

ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಅವರಲ್ಲಿ ಅದ್ಭುತವಾದ ಆಧ್ಯಾತ್ಮಿಕ ಕ್ರಾಂತಿ ಸಂಭವಿಸಿತು. ಮಕ್ಕಾ ವಿಜಯದ ನಂತರ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡ ಖುರೈಶೀ ಮುಖಂಡರಲ್ಲಿ ಯಾರೂ ಕೂಡ ಸುಹೈಲ್‌ಗಿಂತ ಹೆಚ್ಚು ನಿಯತವಾಗಿ ನಮಾಝ್, ಉಪವಾಸ ಮತ್ತು ದಾನ ಮಾಡುವುದರಲ್ಲಿ ಮುಂದೆ ಇದ್ದಿರಲಿಲ್ಲ ಎಂದು ಅವರ ಕುರಿತು ಬರೆಯಲಾಗಿದೆ. ಬಹಳ ಹೆಚ್ಚು ದುಆ ಮಾಡುವವರಾಗಿದ್ದರು ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವಾಗ ಅಳುತ್ತಿದ್ದರು.

**ಮಕ್ಕಾ ವಿಜಯದ ಸಂದರ್ಭದಲ್ಲಿ ಹಝ್ರ್‌ರತ್ ಪೈಗಂಬರ್(ಸ)ರ ಪವಿತ್ರ ಜೀವನಚರಿತ್ರೆಯ ಪ್ರಸ್ತಾವನೆ ಹಾಗೂ ಮಕ್ಕಾ ವಿಜಯದ ನಂತರ ಇಸ್ಲಾಂ ಸ್ವೀಕಾರ ಮಾಡಿದ ಕೆಲವು ಕಠಿಣ ವಿರೋಧಿಗಳ ಪ್ರಸ್ತಾಪ.**

ಸನ್ಮಾನ್ಯ ಚೌಧರಿ ಅಬ್ದುಲ್ ಗ಼ಫೂರ್ ಸಾಹಿಬ್ ಮತ್ತು ಸನ್ಮಾನ್ಯ ಮುಹಮ್ಮದ್ ಅಲಿ ಸಾಹಿಬ್ ಅವರಿಬ್ಬರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ್ ಗ಼ಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **08-08-2025** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಜಲ್ಸಕ್ಕೆ ಮುಂಚೆ ಮಕ್ಕಾ ವಿಜಯದ ಘಟನೆಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಇಸ್ಲಾಂ ಧರ್ಮದ ಕೆಲವು ಕಠಿಣ ವಿರೋಧಿಗಳ ಇಸ್ಲಾಂ ಧರ್ಮ ಸ್ವೀಕಾರದ ಬಗ್ಗೆ ನಾನು ಹೇಳಿದ್ದೆ. ಅವರಲ್ಲಿ ಇನ್ನೂ ಕೆಲವರ ಪ್ರಸ್ತಾಪ ಮಾಡುತ್ತೇನೆ.

ವಹ್‌ಶಿ ಬಿನ್ ಹರ್‌ಬ್: ಇವರು ಉಹುದ್ ಯುದ್ಧದಲ್ಲಿ ಹಝ್ರ್‌ರತ್ ಹಮ್‌ಝಾ(ರ)ರನ್ನು ಶಹೀದ್ ಮಾಡಿದ್ದರು. ಇವರು ಮಕ್ಕಾ ವಿಜಯದ ನಂತರ ತಾಯಿಫ್‌ಗೆ ಓಡಿಹೋದರು. ತಾಯಿಫ್‌ನ ಜನರು ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದಾಗ, ಇವರು ಕೂಡ ಬಂದು ಇಸ್ಲಾಮನ್ನು ಸ್ವೀಕರಿಸಿದರು. (ಸಬ್ಲುಲ್ ಹುದಾ, ಸಂಪುಟ-5, ಪುಟ-225, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಬುಖಾರಿಯ ವರದಿಯಲ್ಲಿ, ವಹ್‌ಶಿಯವರು ಇಸ್ಲಾಂ ಧರ್ಮ ಸ್ವೀಕರಿಸಿದ ಬಗ್ಗೆ ಅವರೇ ಹೇಳುವಂತೆ ಹೀಗೆ ಉಲ್ಲೇಖಿಸಲಾಗಿದೆ. ಅವರು ಹೇಳುತ್ತಾರೆ, ಇಸ್ಲಾಂ ಹರಡುವವರೆಗೂ ನಾನು ಮಕ್ಕಾದಲ್ಲಿಯೇ ಇದ್ದೆ, ನಂತರ ನಾನು ತಾಯಿಫ್‌ಗೆ ಹೋದೆ. ಜನರು ಹಝ್ರ್‌ರತ್ ಪೈಗಂಬರ್(ಸ)ರ ಬಳಿಗೆ ದೂತನನ್ನು ಕಳುಹಿಸಿದರು ಮತ್ತು ಅವರು(ಸ) ದೂತನನ್ನು ಸಹಿಸುವುದಿಲ್ಲ ಎಂದು ನನಗೆ ತಿಳಿಸಲಾಯಿತು. ಅವರು ಹೇಳಿದರು, ನಾನು ಹಝ್ರ್‌ರತ್ ಪೈಗಂಬರ್(ಸ)ರ ಬಳಿಗೆ ತಲುಪುವವರೆಗೂ ನಾನು ಅವರೊಂದಿಗೆ ಹೊರಟೆ. ಅವರು(ಸ) ನನ್ನನ್ನು ನೋಡಿದಾಗ, "ನೀನು ವಹ್‌ಶಿಯೇ?" ಎಂದು ಕೇಳಿದರು, ಅದಕ್ಕೆ ನಾನು "ಹೌದು" ಎಂದು ಹೇಳಿದೆ. ಅವರು(ಸ) "ನೀನು ಹಮ್‌ಝಾರನ್ನು ಕೊಂದಿದ್ದೀಯಾ?" ಎಂದು ಕೇಳಿದರು, ನಾನು ಹೇಳಿದೆ, "ಹೌದು." ಹಝ್ರ್‌ರತ್ ಪೈಗಂಬರ್(ಸ) ಹೇಳಿದರು: "ನಿನ್ನ ಮುಖವನ್ನು ನನ್ನಿಂದ ಮರೆಮಾಡಲು ನಿನಗೆ ಸಾಧ್ಯವೇ?" ತದನಂತರ ನಾನು ಅಲ್ಲಿಂದ ಹೊರಟು ಹೋದೆ. ಅಂದರೆ, ಹಝ್ರ್‌ರತ್ ಪೈಗಂಬರ್(ಸ)ರು ಹೇಳಿದ್ದರ ಅರ್ಥ, "ನಾನು ಅದರ ಬಗ್ಗೆ ಮತ್ತೆ ಯೋಚಿಸದಂತೆ ನಿಮ್ಮ ಮುಖವನ್ನು ನನಗೆ ತೋರಿಸಬೇಡಿ." ನಂತರ ಹಝ್ರ್‌ರತ್ ಪೈಗಂಬರ್(ಸ)ರು ನಿಧನರಾದಾಗ ಮುಸೈಲಿಮಾ ಕಝ್ಝಾಬ್ ದಂಗೆ ಎದ್ದಾಗ, ನಾನು ಖಂಡಿತವಾಗಿಯೂ ಮುಸೈಲಿಮಾನ ಬಳಿಗೆ ಹೋಗಿ ಅವನನ್ನು ವಧಿಸಿ ಅವನ ಮೂಲಕ ಹಝ್ರ್‌ರತ್ ಹಮ್‌ಝಾ ಅವರನ್ನು ಶಹೀದ್ ಮಾಡಿದ ಕಳಂಕವನ್ನು ತೊಳೆದುಕೊಳ್ಳುತ್ತೇನೆ ಎಂದು ಹೇಳಿಕೊಂಡೆ ಎಂದು ಹೇಳಲಾಗಿದೆ. ಅವರು ಮುಂದೆ ಹೇಳುತ್ತಾರೆ: ನಾನು ಕೂಡ ಜನರೊಂದಿಗೆ ಹೊರಗೆ ಹೋದೆ. ನಂತರ ಅವನಿಗೆ ಏನಾಗಬೇಕಿತ್ತು ಅದಾಯಿತು ಅಂದರೆ, ಅವನು ಕೊಲ್ಲಲ್ಪಟ್ಟನು. ಮುಂದೆ ಅವರು ಹೇಳುತ್ತಾರೆ: ಗೋಡೆಯ ಬಿರುಕಿನಲ್ಲಿ ಒಬ್ಬ ವ್ಯಕ್ತಿ ನಿಂತಿರುವುದನ್ನು ನಾನು ನೋಡಿದೆ. ಅವನು ಗೋಧಿ ಬಣ್ಣದ ಒಂಟೆಯಂತೆ ಕಾಣುತ್ತಿತ್ತು. ಅದರ ಕೂದಲು ಕೆದರಿತ್ತು. ಅಲ್ಲಿ ನಿಂತಿದ್ದವನು ಮುಸೈಲಿಮಾ ಕಝ್ಝಾಬ್. ನಾನು ಅವನನ್ನು ನನ್ನ ಈಟಿಯಿಂದ ಹೊಡೆದೆ ಮತ್ತು ಅವನ ಎದೆಯ ನಡುವೆ ಹೊಡೆದೆ, ಅದು ಅವನ ಎರಡು ಭುಜಗಳ ನಡುವೆ ಹೊರಬಂದಿತು. ಅನ್ಸಾರ್‌ನ ಒಬ್ಬ ವ್ಯಕ್ತಿ ಅವನ ಕಡೆಗೆ ಧಾವಿಸಿ ತನ್ನ ಕತ್ತಿಯಿಂದ ಅವನ ತಲೆಬುರುಡೆಯನ್ನು ಹೊಡೆದರು ಎಂದು ಅವನು ಹೇಳಿದರು. ಹೀಗೆ ಅವನು ಕೊಲ್ಲಲ್ಪಟ್ಟನು.

(ಸಹೀಹ್ ಅಲ್-ಬುಖಾರಿ, ಕಿತಾಬುಲ್ ಮಘಾಝಿ, ಹಮ್ಝಾ ಬಿನ್ ಅಬ್ದುಲ್ ಮುತ್ತಲಿಬ್ ಹತ್ಯೆಯ ಅಧ್ಯಾಯ, ಹದೀಸ್ 4072)

ಅದೇ ರೀತಿ ಉಮ್ರೊ ಬಿನ್ ಹಾಶಿಮ್ ಅವರ ದಾಸಿ ಇದ್ದಳು ಆಕೆಯ ಹೆಸರು ಸಾರಾ ಎಂದಾಗಿತ್ತು ಆಕೆ ಗಾಯಕಿಯಾಗಿದ್ದಳು. ಮಕ್ಕಾ ವಿಜಯದ ಮೊದಲು, ಅವರು ಹಝ್ರ್‌ರತ್ ಪೈಗಂಬರ್(ಸ)ರ ಬಳಿ ಸಹಾಯಕ್ಕಾಗಿ ಬಂದರು. 'ನಿನ್ನ ಹಾಡುಗಳಿಗೆ ಏನಾಯಿತು?' ಎಂದು ಹಝ್ರ್‌ರತ್ ಪೈಗಂಬರ್(ಸ) ಅವಳೊಡನೆ ಕೇಳಿದಾಗ, ಅವಳು ಹೀಗೆ ಹೇಳಿದಳು: ಬದ್ರ್ ಯುದ್ಧದಲ್ಲಿ ಖುರೈಶಿಯರ ಮುಖಂಡರು ಮರಣಹೊಂದಿದ ನಂತರ ಮಕ್ಕಾದ ಜನರು ಹಾಡುಗಳನ್ನು ಕೇಳುವುದನ್ನು ನಿಲ್ಲಿಸಿರುವರು. ಅವಳಿಗೆ ಹಝ್ರ್‌ರತ್ ಪೈಗಂಬರ್(ಸ) ಒಂಟೆ ತುಂಬ ಧಾನ್ಯವನ್ನು ನೀಡಿದರು. ತದನಂತರ ಆಕೆ ಅದನ್ನು ಪಡೆದುಕೊಂಡು ಖುರೈಶರ ಬಳಿಗೆ ಬಂದಳು. ಇಬ್ನ್ ಖತ್ತಲ್ ಹಝ್ರ್‌ರತ್ ಪೈಗಂಬರ್(ಸ)ರ ಬಗ್ಗೆ ನಿಂದನೀಯ ಕವಿತೆಗಳನ್ನು ಹೇಳುತ್ತಿದ್ದನು ಮತ್ತು ಆಕೆ ಈ ನಿಂದನೀಯ ಕವಿತೆಗಳನ್ನು ಹಾಡುತ್ತಿದ್ದಳು. ಪ್ರತಿಫಲವನ್ನು ಪಡೆದರೂ, ಹಝ್ರ್‌ರತ್ ಹಾತಿಬ್(ರ)ರ ಪತ್ರ ಪತ್ತೆಯಾಗಿದ್ದು ಈ ಮಹಿಳೆಯ ಬಳಿಯಿಂದಲೇ ಆಗಿತ್ತು. ಮಕ್ಕಾ ವಿಜಯದ ನಂತರ ಇವಳು ಇಸ್ಲಾಂ ಸ್ವೀಕಾರ ಮಾಡಿಕೊಂಡಳು ಮತ್ತು ಹಝ್ರ್‌ರತ್ ಉಮರ್(ರ)ರ ಖಿಲಾಫತ್ ಕಾಲದ ತನಕ ಬದುಕಿದ್ದಳು.

ಅದೇ ರೀತಿ, ಇಬ್ನ್ ಖತ್ತಲ್ ಅವರ ದಾಸಿ ಫರ್ತಾನಾ ಕೂಡ ಹಝ್ರ್‌ರತ್ ಪೈಗಂಬರ್(ಸ) ರವರ ಬಗ್ಗೆ ನಿಂದನೀಯ ಕವಿತೆಗಳನ್ನು ಹಾಡುತ್ತಿದ್ದಳು. ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು.
(ಸಬ್ಲುಲ್ ಹುದಾ ವರ್‍ರಶಾದ್, ಸಂಪುಟ 5, ಪುಟ 225, ದಾರುಲ್ ಕುತುಬ್ ಅಲ್-ಇಲ್ಮಿಯ, ಬೈರುತ್)

ನಂತರ ಹಝ್ರತ್ ಹಾರಿಸ್ ಬಿನ್ ಹಿಶಾಮ್(ರ.ಅ) ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಬಗ್ಗೆ ಬರೆಯಲಾಗಿದೆ. ಇವರು ಮಕ್ಕಾದ ಒಬ್ಬ ಜನಪ್ರಿಯ ಮುಖ್ಯಸ್ಥ ಮತ್ತು ಅಬೂ ಜಹಲ್‌ನ ಸಹೋದರನಾಗಿದ್ದರು. ಹಝ್ರತ್ ಖಾಲಿದ್(ರ)ರ ಸಹೋದರಿ ಇವರ ಪತ್ನಿಯಾಗಿದ್ದಳು. ಮಕ್ಕಾ ವಿಜಯದ ಸಮಯದಲ್ಲಿ, ಅವರು ಮತ್ತು ಅಬ್ದುಲ್ಲಾ ಬಿನ್ ಅಬೀ ರಬೀಅ ಹಝ್ರತ್ ಉಮ್ಮೆ ಹಾನಿ(ರ)ರ ಮನೆಗೆ ಪ್ರವೇಶಿಸಿದರು. ಏಕೆಂದರೆ ಹಝ್ರತ್ ಅಲಿ(ರ) ಇವರಿಬ್ಬರನ್ನು ವಧಿಸಲು ಹಿಂಬಾಲಿಸಿದ್ದರು. ಹಝ್ರತ್ ಉಮ್ಮೆ ಹಾನಿ(ರ) 'ನಾನು ಅವರಿಗೆ ಆಶ್ರಯ ನೀಡಿದ್ದೇನೆ' ಎಂದು ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದಾಗ, ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: 'ನೀನು ಯಾರಿಗೆ ಆಶ್ರಯ ನೀಡಿದ್ದೀಯೋ, ಅವರಿಗೆ ನಾವು ಅಭಯ ನೀಡುತ್ತೇವೆ'.
(ಸೀರತ್ ಹಲಬಿಯಾ, ಪುಟ–133–134, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಾರಿಸ್ ಬಿನ್ ಹಿಶಾಮ್ ವಿವರಿಸುತ್ತಾರೆ ನಾವು ಈ ಮನೆಯಲ್ಲಿ ಎರಡು ದಿನಗಳ ಕಾಲ ಇದ್ದೆವು, ನಂತರ ನಾವು ನಮ್ಮ ಮನೆಗಳಿಗೆ ತೆರಳಿದೆವು. ನಾವು ಅಂಗಳದಲ್ಲಿ ಕುಳಿತಿದ್ದೆವು, ಯಾರೂ ನಮಗೆ ತೊಂದರೆ ನೀಡುತ್ತಿರಲಿಲ್ಲ. ನಾವು ಹಝ್ರತ್ ಉಮರ್‌ಗೆ ಹೆದರುತ್ತಿದ್ದೆವು. ಅವರು ಹೇಳುತ್ತಾರೆ: ಅಲ್ಲಾಹನ ಆಣೆ, ಒಮ್ಮೆ ನಾನು ನನ್ನ ಬಾಗಿಲಲ್ಲಿ ಮೇಲಂಗಿಯನ್ನು ಧರಿಸಿ ಕುಳಿತಿದ್ದೆ, ಆಗ ಇದ್ದಕ್ಕಿದ್ದಂತೆ ಹಝ್ರತ್ ಉಮರ್ ಬಂದರು. ಕೆಲವು ಮುಸ್ಲಿಮರು ಸಹ ಅವರೊಂದಿಗೆ ಇದ್ದರು. ಅವರು ಸಲಾಮ್ ಮಾಡಿ ಹಾದುಹೋದರು. ಹಝ್ರತ್ ಪೈಗಂಬರ್(ಸ)ರು ನನ್ನನ್ನು ಎಲ್ಲೆಡೆ ಬಹುದೇವತಾವಾದಿಗಳೊಂದಿಗೆ ನೋಡಿದ್ದರಿಂದ ಅವರು(ಸ) ನನ್ನನ್ನು ನೋಡಲು ನನಗೆ ನಾಚಿಕೆಯಾಗುತ್ತಿತ್ತು ಎಂದು ಅವರು ವಿವರಿಸುತ್ತಾರೆ. ನಂತರ ನನಗೆ ಹಝ್ರತ್ ಪೈಗಂಬರ್(ಸ.ಅ) ರವರ ಒಳ್ಳೆಯತನ, ಕರುಣೆ, ದಯೆ ಮತ್ತು ರಕ್ತಸಂಬಂಧ ನೆನಪಾಯಿತು. ನಾನು ಅವರನ್ನು ಭೇಟಿಯಾದೆ. ಆ ಸಮಯದಲ್ಲಿ, ಅವರು(ಸ) ಮಸ್ಜಿದ್ ಹರಾಮ್‌ನಲ್ಲಿ ಪ್ರವೇಶಿಸುತ್ತಿದ್ದರು. ಅವರು ನಗುತ್ತಿರುವ ಮುಖದೊಂದಿಗೆ ನನ್ನನ್ನು ಭೇಟಿಯಾದರು. ನಾನು ಅವರನ್ನು ಸಲಾಮ್ ಮಾಡಿ ಕಲಿಮ ಶಹಾದತ್ ಅನ್ನು ಪಠಿಸಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಎಲ್ಲ ಪ್ರಶಂಸೆಗಳು ಅಲ್ಲಾಹನಿಗೆ ಸಲ್ಲುತ್ತವೆ. ಹಾರಿಸ್, ನಿನ್ನಂತಹ ವ್ಯಕ್ತಿ ಇಸ್ಲಾಂ ಧರ್ಮದಿಂದ ಹೇಗೆ ದೂರವಿರಲು ಸಾಧ್ಯ? ಆಗ ಹಾರಿಸ್ ಹೇಳಿದರು: ದೇವನಾಣೆ, ಇಸ್ಲಾಮಿನಿಂದ ದೂರವಿರುವುದು ಸಾಧ್ಯವಲ್ಲ.

(ಸೀರತ್ ಹಲಬಿಯಾ, ಸಂಪುಟ 3, ಪುಟಗಳು 133–134, 146, ದಾರುಲ್ ಕುತುಬ್ ಇಲ್ಮಿಯ, ಬೈರುತ್) (ಇಮ್ತಾ, ಸಂಪುಟ–1, ಪುಟ–389, ದಾರುಲ್ ಕುತುಬ್ ಇಲ್ಮಿಯ, ಬೈರುತ್) (ಸಬ್ಲುಲ್ ಹುದಾ, ಸಂಪುಟ–5, ಪುಟ–250, ದಾರುಲ್ ಕುತುಬ್ ಅಲ್–ಇಲ್ಮಿಯ ಬೈರುತ್) (ಅಸದುಲ್ ಗ್ಾಬಾ, ಸಂಪುಟ–1, ಪುಟ 644–645, ದಾರುಲ್ ಕುತುಬ್ ಅಲ್–ಇಲ್ಮಿಯ ಬೈರುತ್)

ಅದೇ ರೀತಿ ಸುಹೈಲ್ ಬಿನ್ ಅಮ್ರ್ ಇವರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು. ಅವರು ಮಕ್ಕಾದ ಮುಖ್ಯಸ್ಥರೂ ಆಗಿದ್ದರು ಮತ್ತು ಹುದೈಬಿಯಾ ಒಪ್ಪಂದವನ್ನು ತೀರ್ಮಾನಿಸಲು ಖುರೈಶ್‌ಗಳಿಂದ ಪ್ರತಿನಿಧಿಯಾಗಿ ಬಂದಿದ್ದರು. ಅವರೇ ಸ್ವತಃ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮಕ್ಕಾವನ್ನು ಪ್ರವೇಶಿಸಿ ಮೇಲುಗೈ ಸಾಧಿಸಿದಾಗ, ನಾನು ನನ್ನ ಮನೆಗೆ ಪ್ರವೇಶಿಸಿ ಅಡಗಿಕೊಂಡೆ. ತದನಂತರ ನಾನು ನನ್ನ ಪುತ್ರ ಹಝ್ರತ್ ಅಬ್ದುಲ್ಲಾ ಅವರನ್ನು ಹಝ್ರತ್ ಪೈಗಂಬರ್(ಸ)ರ ಅಭಯ ಪಡೆಯಲು ಅವರ ಬಳಿಗೆ ಕಳುಹಿಸಿದೆ. ನಾನು ಕೊಲ್ಲಲ್ಪಡಬಹುದೆಂದು ನಾನು ಭಯಪಟ್ಟೆ. ಹಝ್ರತ್ ಅಬ್ದುಲ್ಲಾ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು, "ಓ ಅಲ್ಲಾಹನ ಸಂದೇಶವಾಹಕರೇ(ಸ)! ನನ್ನ ತಂದೆ ನಿಮ್ಮಿಂದ ಅಭಯ ಬಯಸುತ್ತಿದ್ದಾರೆ ಎಂದು ಹೇಳಿದೆ. ಮಕ್ಕಾದ ಜನರಿಗೆ ಸಾರ್ವತ್ರಿಕ ಕ್ಷಮಾದಾನ ಮತ್ತು ಅಭಯ ನೀಡಲಾಗಿತ್ತು. ವಾಸ್ತವವಾಗಿ, ಇವರು ಸತ್ಯನಿಷೇಧಿಗಳು ನಾಯಕರಾಗಿದ್ದರು ಮತ್ತು ಅವರು ಎಷ್ಟು ಉಗ್ರ ವಿರೋಧಿಗಳಾಗಿದ್ದರು ಎಂದರೆ ಅವರನ್ನು ಸಮಾಧಾನಪಡಿಸಲು ಸಾಧ್ಯವಾಗಲಿಲ್ಲ ಮತ್ತು ಅವರು ಸುರಕ್ಷಿತವಾಗಿರುತ್ತಾರೆ ಎಂದು ಯೋಚಿಸಲೂ ಸಾಧ್ಯವಾಗಲಿಲ್ಲ ಮತ್ತು ಅವರ ಅಜ್ಞಾನದ ಚಿಂತನೆಯ ಪ್ರಕಾರ, ಅವರು ತಮ್ಮಿಂದ ಸೇಡು ತೀರಿಸಿಕೊಳ್ಳುತ್ತಾರೆ ಎಂದು ನಿರಂತರವಾಗಿ ಚಿಂತಿತರಾಗಿದ್ದರು, ಇದರಿಂದಾಗಿ ಅವರು ತಮ್ಮ ಮಗನನ್ನು ಮತ್ತೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ಹೇಳಿದರು, "ಸರಿ, ಅವರು ಸರ್ವಶಕ್ತನಾದ ಅಲ್ಲಾಹನ ರಕ್ಷಣೆಯಿಂದ ಸುರಕ್ಷಿತರಾಗಿದ್ದಾರೆ." ಅವರು ಮುಂದೆ ಬಂದರು, ಅಂದರೆ, ಅವರು ಹೊರಗೆ ಮುಕ್ತವಾಗಿ ತಿರುಗಾಡಬಲ್ಲವರಾದರು. ಹಝ್ರತ್ ಪೈಗಂಬರ್(ಸ)ರು ತಮ್ಮ ಸುತ್ತಲೂ ಕುಳಿತಿದ್ದ ಸಹಚರರಿಗೆ ಹೇಳಿದರು, "ನಿಮ್ಮಲ್ಲಿ ಯಾರಾದರೂ ಸುಹೈಲ್ ಅವರನ್ನು ಭೇಟಿಯಾದರೆ, ಅವರನ್ನು ತೀಕ್ಷ್ಣವಾದ ಕಣ್ಣುಗಳಿಂದ ನೋಡಬೇಡಿ. ಸುಹೈಲ್‌ನಂತಹ ಬುದ್ಧಿವಂತ ಮತ್ತು ಗೌರವಾನ್ವಿತ ವ್ಯಕ್ತಿ ಇಸ್ಲಾಂ ಧರ್ಮದಿಂದ ಹೆಚ್ಚು ಕಾಲ ದೂರವಿರಲು ಸಾಧ್ಯವಿಲ್ಲ.' ಅವರು ಇದ್ದ ಸ್ಥಿತಿ, ಅಂದರೆ ಅಪನಂಬಿಕೆಯ ಸ್ಥಿತಿ, ಅವರಿಗೆ ಪ್ರಯೋಜನಕಾರಿಯಲ್ಲ ಎಂದು ಅವರು ನೋಡಿದ್ದಾರೆ." ಹಝ್ರತ್ ಅಬ್ದುಲ್ಲಾ ತಮ್ಮ ತಂದೆಯ ಬಳಿಗೆ ಹೋಗಿ ಹಝ್ರತ್ ಪೈಗಂಬರ್(ಸ)ರ ಆಜ್ಞೆಯ ಬಗ್ಗೆ ಹೇಳಿದರು. ಅದಕ್ಕೆ ಸುಹೈಲ್ ಹೇಳಿದರು, "ಅಲ್ಲಾಹನ ಆಣೆ! ಮುಹಮ್ಮದ್(ಸ) ಬಾಲ್ಯದಲ್ಲೂ ಉಪಕಾರಿಯಾಗಿದ್ದರು ಮತ್ತು ಈ ವಯಸ್ಸಿನಲ್ಲೂ ಔದಾರ್ಯವಂತರಾಗಿದ್ದಾರೆ."

ಹಝ್ರತ್ ಸುಹೈಲ್ ಶಾಂತಿಯುತವಾಗಿ ಬರುತ್ತಿದ್ದರು ಹೋಗುತ್ತಿದ್ದರು. ಹುನೈನ್ ಯುದ್ಧದಲ್ಲಿ ಅವರು ಇಸ್ಲಾಂ ಸ್ವೀಕಾರ ಮಾಡದೇ ಯುದ್ಧದಲ್ಲಿ ಭಾಗಿಯಾಗಿದ್ದರು, ಅವರು ಹುನೈನ್ ಯುದ್ಧದಲ್ಲಿ ಸೇರಿದರು ಆದರೆ ಆ ಸಮಯದಲ್ಲಿ ಇಸ್ಲಾಂ ಸ್ವೀಕರಿಸಲಿಲ್ಲ. ಹುನೈನ್ ಯುದ್ಧದಿಂದ ಹಿಂದಿರುಗಿದ ನಂತರ, ಅವರು ಜ'ರಾನಾದಲ್ಲಿ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು, ಇದು ಮಕ್ಕಾದಿಂದ ಇಪ್ಪತ್ತೇಳು ಕಿಲೋಮೀಟರ್ ದೂರದಲ್ಲಿದೆ ಎಂದು ಹೇಳಲಾಗುತ್ತದೆ, ಇದು ತಾಯಿಫ್‌ಗೆ ಹೋಗುವ ದಾರಿಯಲ್ಲಿರುವ ಒಂದು ಬಾವಿಯಾಗಿದೆ.

(ಸೀರತ್ ಹಲಾಬಿಯಾ, ಸಂಪುಟ 3, ಪುಟ 146, ದಾರುಲ್ ಕುತುಬ್ ಅಲ್–ಇಲ್ಮಿಯ, ಬೈರುತ್) (ಇಮ್ತಾ' ಅಲ್–ಇಸ್ಮಾ, ಸಂಪುಟ–13, ಪುಟ–386, ದಾರುಲ್ ಕುತುಬ್ ಅಲ್–ಇಲ್ಮಿಯ, ಬೈರುತ್) (ಫರ್ಹಂಗ್ ಸೀರತ್, ಪುಟ 88, ಝೋವಾರ್ ಅಕಾಡೆಮಿ)

ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ನಂತರ, ಅವರಲ್ಲಿ ಅದ್ಭುತವಾದ ಆಧ್ಯಾತ್ಮಿಕ ಕ್ರಾಂತಿ ಸಂಭವಿಸಿತು. ಮಕ್ಕಾ ವಿಜಯದ ನಂತರ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡ ಖುರೈಶೀ ಮುಖಂಡರಲ್ಲಿ ಯಾರೂ ಕೂಡ ಸುಹೈಲ್‌ಗಿಂತ ಹೆಚ್ಚು ನಿಯತವಾಗಿ ನಮಾಝ್, ಉಪವಾಸ ಮತ್ತು ದಾನ ಮಾಡುವುದರಲ್ಲಿ ಮುಂದೆ ಇದ್ದಿರಲಿಲ್ಲ ಎಂದು ಅವರ ಕುರಿತು ಬರೆಯಲಾಗಿದೆ. ಬಹಳ ಹೆಚ್ಚು ದುಆ ಮಾಡುವವರಾಗಿದ್ದರು ಮತ್ತು ಪವಿತ್ರ ಖುರ್‌ಆನ್ ಪಾರಾಯಣ ಮಾಡುವಾಗ ಅಳುತ್ತಿದ್ದರು.
(ಅಸದ್ ಅಲ್–ಘಬಾ, ಸಂಪುಟ 2, ಪುಟ 586, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್)

ಹಝ್ರತ್ ಅಬುಬಕರ್(ರ) ವಿವರಿಸುತ್ತಾರೆ, ಹಜ್ಜತುಲ್ ವಿದಾವಿನ ಸಮಯದಲ್ಲಿ, ಸುಹೈಲ್ ಬಿನ್ ಅಮ್ರ್ ವಧೆಯ ಸ್ಥಳದಲ್ಲಿ ನಿಂತು ಹಝ್ರತ್ ಪೈಗಂಬರ್(ಸ) ರವರ ಬಲಿದಾನದ ಪ್ರಾಣಿಯನ್ನು ಹಝ್ರತ್ ಪೈಗಂಬರ್(ಸ)ರ ಹತ್ತಿರ ತರುವುದನ್ನು ನಾನು ನೋಡಿದೆ. ಹಝ್ರತ್ ಪೈಗಂಬರ್(ಸ)ರು ಅದನ್ನು ತಮ್ಮ ಕೈಗಳಿಂದಲೇ ವಧಿಸಿದರು. ನಂತರ ಅವರು ಕ್ಷೌರಿಕನನ್ನು ಕರೆದು ತಮ್ಮ ಕೂದಲನ್ನು ಬೋಳಿಸಿಕೊಂಡರು. ಸುಹೈಲ್ ಹಝ್ರತ್ ಪೈಗಂಬರ್(ಸ) ರವರ ಅನುಗ್ರಹದಾಯಕ ಕೂದಲನ್ನು ತಮ್ಮ ಕಣ್ಣುಗಳ ಮೇಲೆ ಇಡುವುದನ್ನು ನಾನು ನೋಡಿದೆ ಎಂದು ಹೇಳಲಾಗುತ್ತದೆ. ಹಝ್ರತ್ ಪೈಗಂಬರ್(ಸ) ಕತ್ತರಿಸಿದ ಕೂದಲು ಸುಹೈಲ್ ಅವರ ಕೈಗೆ ಬಂದಾಗ, ಅವರು ಅದನ್ನು ಅವರ ಕಣ್ಣುಗಳ ಮೇಲೆ ಇರಿಸಿಕೊಂಡರು. ಆ ಸಮಯದಲ್ಲಿ, ಇದೇ ಸುಹೈಲ್, ಹುದೈಬಿಯಾ ಒಪ್ಪಂದದ ಮೇಲೆ ಹಝ್ರತ್ ಪೈಗಂಬರ್(ಸ)ರಿಗೆ ಬಿಸ್ಮಿಲ್ಲಾ ಅಲ್–ರಹಮಾನ್ ಅಲ್–ರಹೀಮ್ ಬರೆಯುವುದನ್ನು ತಡೆಯುತ್ತಿದ್ದನೆಂದು ನನಗೆ ನೆನಪಾಯಿತು ಎಂದು ಹೇಳಲಾಗುತ್ತದೆ, ಮತ್ತು ಅವರು ರಸೂಲ್ ಎಂಬ ಪದದೊಂದಿಗೆ ಮುಹಮ್ಮದ್ ಎಂಬ ಪದವನ್ನು ಬರೆಯುವುದನ್ನು ಸಹ ವಿರೋಧಿಸಿದರು ಮತ್ತು ರಸೂಲ್ ಎಂಬ ಪದವನ್ನು ಅಳಿಸುವವರೆಗೂ ಅವರು ಒಪ್ಪಂದವನ್ನು ಬರೆಯಲು ಪ್ರಾರಂಭಿಸಲಿಲ್ಲ. ಹಝ್ರತ್ ಅಬುಬಕರ್(ರ) ಹೇಳುತ್ತಾರೆ: ನಾನು ಸುಹೈಲ್ ಅವರನ್ನು ಇಸ್ಲಾಂಗೆ ಮಾರ್ಗದರ್ಶನ ನೀಡಿದ ಸರ್ವಶಕ್ತನಾದ ಅಲ್ಲಾಹನನ್ನು ಸ್ತುತಿಸಿದೆ ಮತ್ತು ನಂತರ ಅವರಿಗೆ ಮಾರ್ಗದರ್ಶನ ನೀಡಿದಾಗ, ಅವರು ಪ್ರಾಮಾಣಿಕತೆ ಮತ್ತು ನಿಷ್ಠೆಯಲ್ಲಿ ಅಪಾರವಾಗಿ ಹೆಚ್ಚಾದರು. (ಸಬ್ಲುಲ್ ಹುದಾ, ಸಂಪುಟ–5, ಪುಟ 64, ದಾರುಲ್–ಕುತುಬ್ ಅಲ್–ಇಲ್ಮಿಯಾ, ಬೈರುತ್)

ಸುಹೈಲ್ ಬಿನ್ ಅಮ್ರ್ ಅವರ ಇನ್ನೊಂದು ಮಹಾತ್ಕಾರ್ಯದ ಬಗ್ಗೆ ಹೀಗೆ ಹೇಳಲಾಗಿದೆ: ಖುರೈಶಿಯರಲ್ಲಿ ಸುಹೈಲ್ ಒಬ್ಬ ಉತ್ತಮ ವಾಗ್ಮಿಯೂ ಆಗಿದ್ದರು. ಬದ್ರ್ ಯುದ್ಧದಲ್ಲಿ ಇವರು ಇಸ್ಲಾಂ ವಿರೋಧಿಯಾಗಿ ಬಂಧಿಯಾಗಿ ಬಂದಾಗ, ಅವರು ತನ್ನ ತುಟಿಗಳ ಮೇಲೆ ಗುರುತು ಮಾಡಿಕೊಂಡಿದ್ದರು. ಆಗ ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಅಲ್ಲಾಹನ ರಸೂಲರೇ, ಇವರ ಮುಂದಿನ ಎರಡು ಹಲ್ಲುಗಳನ್ನು ತೆಗೆಸಿಬಿಡಿರಿ, ಇದರಿಂದ ಇವರಿಗೆ ನಿಮ್ಮ

ವಿರುದ್ಧ ಭಾಷಣ ಮಾಡಲಿಕ್ಕಾಗಿ ನಿಲ್ಲಲು ಸಾಧ್ಯವಾಗದು.

ಹಝ್ರತ್ ಪೈಗಂಬರ್(ಸ) ಹೇಳಿದರು: ಹೇ ಉಮರ್, ಅವನನ್ನು ಬಿಟ್ಟುಬಿಡು, ಒಂದು ದಿನ ನೀವು ಅವರನ್ನು ಹೊಗಳುವ ಸ್ಥಾನದಲ್ಲಿ ಅವರು ನಿಲ್ಲುವರು.'

ಅವರನ್ನು ಶಿಕ್ಷಿಸಬೇಕೆಂದು ಹಝ್ರತ್ ಉಮರ್(ರ) ಬಯಸುತ್ತಿದ್ದರು. ಆದರೆ ಹಾಗೆ ಮಾಡುವುದು ಬೇಡವೆಂದೂ ನೀವು ಅವರನ್ನು ಹೊಗಳುವಂತಹ ಮಾತುಗಳನ್ನು ಆಡುವ ಸ್ಥಾನಕ್ಕೆ ಅವರು ತಲುಪುವರು ಎಂದೂ ಹಝ್ರತ್ ಪೈಗಂಬರ್(ಸ) ಹೇಳಿದರು. ಆ ಸಂದರ್ಭ ಹೇಗೆ ಬಂತು ಎಂದರೆ, ಹಝ್ರತ್ ಪೈಗಂಬರ್(ಸ)ರ ನಿಧನದ ನಂತರ ಮಕ್ಕಾದ ಜನರು ವಿಚಲಿತರಾದಾಗ, ಮಕ್ಕಾದ ಜನರು ಇಸ್ಲಾಮನ್ನು ತ್ಯಜಿಸುವುದನ್ನು ಖುರೈಶಿಯರು ಕಂಡರು. ಮಕ್ಕಾದ ಮುಖ್ಯಸ್ಥರಾಗಿ ಹಝ್ರತ್ ಪೈಗಂಬರ್(ಸ) ನೇಮಿಸಿದ್ದ ಹಝ್ರತ್ ಇತಾಬ್ ಬಿನ್ ಉಸೈದ್ ಅಮವೀ(ರ) ಅಡಗಿಕೊಂಡರು. ಅಂತಹ ಕೆಟ್ಟ ಪರಿಸ್ಥಿತಿಯಲ್ಲಿ ಹಝ್ರತ್ ಸುಹೈಲ್ ಬಿನ್ ಅಮ್ರ್(ರ) ನಿಂತುಕೊಂಡು ಹೀಗೆ ಭಾಷಣ ಮಾಡಿದರು: ಎಲೈ ಖುರೈಶ್ ಸಮೂಹವೇ, ನೀವು ಕೊನೆಯಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡಿದ್ದೀರಿ. ಕೊನೆಯಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿಕೊಂಡು, ಇಸ್ಲಾಮನ್ನು ಬಿಡುವುದರಲ್ಲಿ ಮೊದಲಿಗರಾಗಬೇಡಿರಿ. ಅಲ್ಲಾಹನಾಣೆ, ಸೂರ್ಯ ಮತ್ತು ಚಂದ್ರ ಉದಯದಿಂದ ಅಸ್ತಮದ ತನಕ ಚಲಿಸುವಂತೆ ಈ ಧರ್ಮವು ಹರಡುವುದು. ಹೀಗೆ ಸುಹೈಲ್(ರ) ದೀರ್ಘವಾದ ಭಾಷಣ ಮಾಡಿದರು. ಈ ಭಾಷಣವು ಮಕ್ಕಾದ ಜನರ ಹೃದಯಗಳ ಮೇಲೆ ಪ್ರಭಾವ ಬೀರಿತು ಮತ್ತು ಅವರು ಇಸ್ಲಾಮ್ ಧರ್ಮವನ್ನು ಬಿಟ್ಟುಹೋಗಲಿಲ್ಲ. ಅಡಗಿಕೊಂಡಿದ್ದ ಹಝ್ರತ್ ಅತ್ತಾಬ್ ಬಿನ್ ಉಸೈದ್(ರ)ರನ್ನೂ ಕರೆಯಲಾಯಿತು. ಖುರೈಶಿಯರು ಇಸ್ಲಾಮ್ ಧರ್ಮದಲ್ಲಿ ಸ್ಥಿರಚಿತ್ತರಾಗಿ ನಿಂತರು. (ಅಸದುಲ್ ಗಾಬಾ, ಸಂಪುಟ-2, ಪುಟ-585, ದಾರುಲ್ ಕುತುಬ್ ಇಲ್ಮಿಯಾ ಬೈರುತ್)

ಹಝ್ರತ್ ಉತ್ಬ ಮತ್ತು ಮುಅತ್ತಬ್ ಇಸ್ಲಾಂ ಸ್ವೀಕಾರ: ಹಝ್ರತ್ ಅಬ್ಬಾಸ್(ರ) ವರದಿ ಮಾಡುತ್ತಾರೆ: ಮಕ್ಕಾ ವಿಜಯದ ದಿನ ಅಬುಲಹಬ್‌ನ ಪುತ್ರರಾದ ಉತ್ಬ ಮತ್ತು ಮುಅತ್ತಬ್ ಬಗ್ಗೆ ಹಝ್ರತ್ ಪೈಗಂಬರ್(ಸ) ಕೇಳಿದಾಗ, ಅವರು ಇತರ ಮುಶ್ರಿಕರ ಹಾಗೆಯೇ ಇಸ್ಲಾಮಿನಿಂದ ದೂರವಿದ್ದಾರೆ ಎಂದು ನಾನು ಹೇಳಿದೆ. ಹಝ್ರತ್ ಪೈಗಂಬರ್(ಸ) ಹೇಳಿದರು, "ಅವರನ್ನು ನನ್ನ ಬಳಿಗೆ ತನ್ನಿ." ಹಝ್ರತ್ ಅಬ್ಬಾಸ್(ರ) ಅರಫಾತ್ ಬಳಿಯ ಕಣಿವೆಯಾದ ಉರ್ನಾಗೆ ಸವಾರಿ ಮಾಡಿ ಅವರನ್ನು ಕರೆತಂದರು. ಹಝ್ರತ್ ಪೈಗಂಬರ್(ಸ) ಇಬ್ಬರನ್ನೂ ಇಸ್ಲಾಂ ಧರ್ಮಕ್ಕೆ ಆಹ್ವಾನಿಸಿದರು. ಅವರು ಇಸ್ಲಾಂ ಸ್ವೀಕಾರ ಮಾಡಿಕೊಂಡು ಬೈಅತ್ ಪ್ರತಿಜ್ಞೆ ಮಾಡಿದರು. ಅನಂತರ ಹಝ್ರತ್ ಪೈಗಂಬರ್(ಸ) ಎದ್ದು, ಅವರ ಕೈಗಳನ್ನು ಹಿಡಿದು, ಹಜರೇ ಅಸ್ವದ್ ಮತ್ತು ಕಅಬದ ಬಾಗಿಲಿನ ನಡುವಿನ ಮುಲ್‌ತಝಮ್ ಎಂಬ ಗೋಡೆಯ ಭಾಗಕ್ಕೆ ಕರೆತಂದರು. ಅದನ್ನು ಹಿಡಿದು ದುಆ ಮಾಡುವುದು ಸುನ್ನತ್ ಆಗಿದೆ ಮತ್ತು ಅದು ದುಆ ಸ್ವೀಕಾರದ ವಿಶೇಷ ಸ್ಥಳವಾಗಿದೆ. ಹಝ್ರತ್ ಪೈಗಂಬರ್(ಸ) ಅಲ್ಲಿ ಕೆಲವು ಸಮಯ ದುಆ ಮಾಡಿದರು. ಹಝ್ರತ್ ಪೈಗಂಬರ್(ಸ)ರ ಮುಖದ ಮೇಲೆ ಸಂತೋಷವನ್ನು ಕಾಣಬಹುದಾಗಿತ್ತು. ಹಝ್ರತ್ ಅಬ್ಬಾಸ್(ರ) ಹೇಳಿದರು: ಅಲ್ಲಾಹನ ಪ್ರವಾದಿಯೇ(ಸ), ಅಲ್ಲಾಹನು ನಿಮ್ಮನ್ನು ಸಂತೋಷವಾಗಿರಿಸಲಿ, ನಾನು ನಿಮ್ಮ ಮುಖದಲ್ಲಿ ಸಂತೋಷದ ಚಿಹ್ನೆಗಳನ್ನು ನೋಡುತ್ತಿದ್ದೇನೆ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನನ್ನ ಚಿಕ್ಕಪ್ಪನ ಇಬ್ಬರು ಮಕ್ಕಳನ್ನು ನನ್ನ ಪ್ರಭುವಿನಿಂದ ಬೇಡಿದ್ದೆ, ಅವನು ನನಗೆ ಇಬ್ಬರನ್ನೂ ದಯಪಾಲಿಸಿದನು.

(ಸಬ್ಲುಲ್ ಹುದಾ, ಸಂಪುಟ 5, ಪುಟ 250, ದಾರುಲ್ ಕುತುಬ್ ಅಲ್-ಇಲ್ಮಿಯ, ಬೈರುತ್) (ಫರ್ಹಂಗ್ ಸೀರತ್, ಪುಟ 59, 284, ಝೋವರ್ ಅಕಾಡೆಮಿ)

ನಂತರ ಸಫ್ವಾನ್ ಬಿನ್ ಉಮಯ್ಯಾ ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು: ಇವರು ಮಕ್ಕಾದ ಮುಖಂಡ ಉಮಯ್ಯಾ ಬಿನ್ ಖಲಫ್‌ರ ಪುತ್ರನಾಗಿದ್ದರು. ಅವರು ಅಜ್ಞಾನದ ಸಮಯದಲ್ಲಿ ಖುರೈಶ್‌ಗಳ ಗಣ್ಯರಲ್ಲಿ ಒಬ್ಬರಾಗಿದ್ದರು ಮತ್ತು ಖುರೈಶ್‌ಗಳಲ್ಲಿ ಅತ್ಯಂತ ವಾಗ್ಮಿ ಜನರಲ್ಲಿ ಒಬ್ಬರಾಗಿದ್ದರು ಮತ್ತು ಇಸ್ಲಾಂ ಧರ್ಮದ ಉಗ್ರ ಶತ್ರುವಾಗಿದ್ದರು. ಅವರು ಮಕ್ಕಾದಲ್ಲಿ ಮುಸ್ಲಿಮರಿಗೆ ತೊಂದರೆ ಮತ್ತು ದುಃಖವನ್ನುಂಟುಮಾಡುವ ಜನರಲ್ಲಿ ಒಬ್ಬರಾಗಿದ್ದರು. ಬದ್ರ್ ಯುದ್ಧದ ನಂತರ, ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಲು ಸಂಚು ರೂಪಿಸಿದ್ದರು ಮತ್ತು ಈ ಕಾರ್ಯಕ್ಕಾಗಿ ಉಮೈರ್ ಇಬ್ನ್ ವಹ್ಬ್ ಅವರನ್ನು ಸಿದ್ಧಪಡಿಸಿದ್ದರು.

ಕೊಲ್ಲಲು ಆದೇಶಿಸಲಾದವರಲ್ಲಿ ಅವರ ಹೆಸರು ಇಲ್ಲದಿದ್ದರೂ, ಅವರು ಕೊಲ್ಲಲ್ಪಡುತ್ತಾರೆ ಎಂಬ ಯೋಚನೆ ಮತ್ತು ಭಯದಿಂದ ಮಕ್ಕಾದಿಂದ ಪಲಾಯನ ಮಾಡಿದ್ದರು. ಅವರು ಜೆದ್ದಾ ಕಡೆಗೆ ಕೆಂಪು ಸಮುದ್ರದ ಕಡೆಗೆ ಓಡಿಹೋದರು. ಉಮೈರ್ ಇಬ್ನ್ ವಹ್ಬ್ ಅವರ ಸ್ನೇಹಿತರಾಗಿದ್ದರು ಅವರು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ್ದರು, ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಲು ಸಫ್ವಾನ್ ಮದೀನಕ್ಕೆ ಕಳುಹಿಸಿದ್ದ ಅದೇ ಉಮೈರ್ ಇವರೇ ಆಗಿದ್ದರು. ಅವರನ್ನು ನೀವು ಹಝ್ರತ್ ಪೈಗಂಬರ್(ಸ)ರನ್ನು ಕೊಂದರೆ, ನಿಮ್ಮ ಮಕ್ಕಳ ಪಾಲನೆ ಮತ್ತು ಆರೈಕೆಯನ್ನು ನನಗೆ ವಹಿಸಲಾಗುವುದು ಎಂದು ಹೇಳಿದ್ದನು. ಆದರೆ ಉಮೈರ್ ಮದೀನಾ ತಲುಪಿದಾಗ, ಹಝ್ರತ್ ಪೈಗಂಬರ್(ಸ)ರಿಗೆ ಅವರ ಸಂಪೂರ್ಣ ಯೋಜನೆಯ ಬಗ್ಗೆ ತಿಳಿದುಕೊಂಡರು ಮತ್ತು ಈ ಪವಾಡವನ್ನು ನೋಡಿದ ಉಮೈರ್ ತಕ್ಷಣವೇ ಇಸ್ಲಾಂಗೆ ಮತಾಂತರಗೊಂಡರು. ಈಗ, ಮಕ್ಕಾ ವಿಜಯದ ಸಂದರ್ಭದಲ್ಲಿ, ಉಮೈರ್ ತನ್ನ ಸ್ನೇಹಿತ ಸಫ್ವಾನ್ ಅನ್ನು ಇಸ್ಲಾಂಗೆ ಮತಾಂತರಗೊಳ್ಳಬೇಕೆಂದು ಆತಂಕ ಮತ್ತು ಚಿಂತನಶೀಲರಾಗಿದ್ದರು. ಹಝ್ರತ್ ಉಮೈರ್ ಬಿನ್ ವಹ್ಬ್(ರ) ಹಝ್ರತ್ ಪೈಗಂಬರ್(ಸ) ರವರ ಬಳಿಗೆ ಬಂದು ಹೇಳಿದರು, ಓ ಅಲ್ಲಾಹನ ಸಂದೇಶವಾಹಕರೇ(ಸ): ಸಫ್ವಾನ್ ನನ್ನ ಖೌಮಿನ ನಾಯಕರಾಗಿದ್ದಾರೆ. ಅವರು ನಿಮ್ಮ ಭಯದಿಂದ ಓಡಿಹೋಗಿದ್ದಾರೆ. ದಯವಿಟ್ಟು ಅವರಿಗೆ ಅಭಯವನ್ನು ನೀಡಿರಿ. ಹಝ್ರತ್‌ನ ಪೈಗಂಬರ್(ಸ) ಹೇಳಿದರು: ಅವರು ಸುರಕ್ಷಿತರಾಗಿದ್ದಾರೆ. ನಿಮ್ಮ ರಕ್ಷಣೆಯ ಸಂಕೇತವಾಗಿ ನಾನು ಅವರಿಗೆ ತೋರಿಸಬಹುದಾದ ನಿಮ್ಮ ಒಂದು ಚಿಹ್ನೆಯನ್ನು ನನಗೆ ನೀಡಬೇಕೆಂದು ಅವರು ಕೇಳಿಕೊಂಡರು. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಅವರು ಧರಿಸಿದ್ದ ತಮ್ಮ ಪೇಟವನ್ನು ತೆಗೆದು ಅವರಿಗೆ ನೀಡಿದರು. ಹಝ್ರತ್ ಉಮೈರ್ ದೋಣಿ ಹತ್ತಲು ಹೊರಟಿದ್ದ ಸಫ್ವಾನ್ ಅವರನ್ನು ಭೇಟಿಯಾಗುವವರೆಗೂ ಪ್ರಯಾಣ ಬೆಳೆಸಿದರು. ಹಝ್ರತ್ ಉಮೈರ್ ಅವರಿಗೆ ಹೇಳಿದರು, "ನಾನು ಎಲ್ಲ ಜನರಲ್ಲಿ ಅತ್ಯಂತ ಪರಿಶುದ್ಧರೂ, ಎಲ್ಲ ಜನರಲ್ಲಿ ಅತ್ಯಂತ ನಿಷ್ಠಾವಂತರೂ ಆಗಿರುವಾತನಿಂದ ಬಂದಿದ್ದೇನೆ. ನಿಮ್ಮನ್ನು ನಾಶಮಾಡಿಕೊಳ್ಳಲು ಬಿಡಬೇಡಿ. ನಾನು ಹಝ್ರತ್‌ನ ಪೈಗಂಬರ್(ಸ)ರ ರಕ್ಷಣೆಯನ್ನು ನಿಮಗೆ ತಂದಿದ್ದೇನೆ. ಅದನ್ನು ಆಲಿಸಿ ಸಫ್ವಾನ್ ಹೇಳಿದರು, "ನನಗೆ ತಿಳಿದಿರುವ ಅವರ ಯಾವುದೇ ಚಿಹ್ನೆಯನ್ನು ನೀವು ನನಗೆ ತೋರಿಸುವವರೆಗೆ ನಾನು ನಿಮ್ಮೊಂದಿಗೆ ಹಿಂತಿರುಗುವುದಿಲ್ಲ." ಆಗ, ಅವರು ಹಝ್ರತ್ ಪೈಗಂಬರ್(ಸ)ರು ನನಗೆ ನೀಡಿದ್ದ ಪೇಟವನ್ನು ಅವರಿಗೆ ತೋರಿಸಿದರು. ಸಫ್ವಾನ್ ಹಝ್ರತ್ ಉಮೈರ್ ಅವರೊಂದಿಗೆ ಬಂದರು. ಹಝ್ರತ್ ಪೈಗಂಬರ್(ಸ)ರು ಮಸೀದಿಯಲ್ಲಿ ಅಸರ್ ನಮಾಝನ್ನು ನಡೆಸುತ್ತಿರುವಾಗ ಹಝ್ರತ್ ಪೈಗಂಬರ್(ಸ) ಬಳಿಗೆ ಬಂದರು. ಹಝ್ರತ್ ಪೈಗಂಬರ್(ಸ)ರು ನಮಾಝ್ ಮುಗಿಸಿದಾಗ ಸಫ್ವಾನ್ ಜೋರಾಗಿ ಹೇಳಿದರು, "ಓ ಮುಹಮ್ಮದ್ (ಸ)! "ನೀವು ನನಗೆ ಅಭಯ ನೀಡಿದ ನಿಮ್ಮ ನಿಲುವಂಗಿಯನ್ನು ಉಮೈರ್ ನನಗೆ ತಂದಿದ್ದಾರೆ." ಹಝ್ರತ್ ಪೈಗಂಬರ್(ಸ)ರು ಹೇಳಿದರು, "ಅದು ಸಂಪೂರ್ಣವಾಗಿ ನಿಜ." ಅವರು ಹೇಳಿದರು, "ನನಗೆ ಎರಡು ತಿಂಗಳು ಸಮಯ ಕೊಡಿ, ನಾನು ಇನ್ನೂ ಇಸ್ಲಾಂ ಸ್ವೀಕರಿಸಲು ಬಯಸುವುದಿಲ್ಲ." ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, "ನಾಲ್ಕು ತಿಂಗಳುಗಳು ನೀಡಲಾಗಿದೆ. ಆಶಾದಾಯಕವಾಗಿ, ನೀವು ಇಸ್ಲಾಂ ಅನ್ನು ಸ್ವೀಕರಿಸುತ್ತೀರಿ." ಆದ್ದರಿಂದ ಸಫ್ವಾನ್ ಮಕ್ಕಾದಲ್ಲಿ ಬಹುದೇವತಾವಾದಿಯಾಗಿ ವಾಸಿಸುವುದನ್ನು ಮುಂದುವರೆಸಿದರು. ಹಝ್ರತ್ ಪೈಗಂಬರ್(ಸ)ರು ಹವಾಝಿನ್‌ಗೆ ಹೋಗಿ ತಾಯಿಫ್ ಮತ್ತು ಹುನೈನ್ ಯುದ್ಧಗಳ ನಂತರ ಯುದ್ಧ ಸಂಪತ್ತನ್ನು ಹಂಚಿದಾಗ, ಅವರು ಸಫ್ವಾನ್ ಅನ್ನು ನೋಡಿದರು. ಅವರು ಕುರಿ ಮತ್ತು ಮೇಕೆಗಳಿಂದ ತುಂಬಿದ್ದ ಕಣಿವೆಯನ್ನು ನೋಡುತ್ತಿದ್ದರು. ಅವರು ಅವುಗಳನ್ನು ನಿರಂತರವಾಗಿ ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ)ರು ಸರಕುಗಳು ತುಂಬಿದ್ದ ಕಣಿವೆಯನ್ನು ನೋಡುತ್ತಿದ್ದ ಸಫ್ವಾನ್ ಅವರನ್ನು ಸಹ ನೋಡುತ್ತಿದ್ದರು. ಹಝ್ರತ್ ಪೈಗಂಬರ್(ಸ) ಹೇಳಿದರು: "ಈ ಕಣಿವೆ ನಿಮಗೆ ಆಶ್ಚರ್ಯವನ್ನುಂಟುಮಾಡಿದೆಯೇ, ಈ ಕಣಿವೆಯಲ್ಲಿ ಎಷ್ಟು ಸಂಪತ್ತು ಇದೆ?" ಸಫ್ವಾನ್ ಹೇಳಿದರು, "ಹೌದು! ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, "ಈ ಕಣಿವೆ ಮತ್ತು ಅದರಲ್ಲಿರುವ ಎಲ್ಲವೂ ನಿಮ್ಮದು. ಅದನ್ನು ತೆಗೆದುಕೊಳ್ಳಿ." ಸಫ್ವಾನ್ ಆ ಎಲ್ಲಾ ಆಸ್ತಿಯನ್ನು ವಶಪಡಿಸಿಕೊಂಡರು ಮತ್ತು ಹೇಳಿದರು, "ಒಬ್ಬ ಪ್ರವಾದಿ ದಾನ ಮಾಡುವಷ್ಟು ಉತ್ತಮವಾಗಿ ಯಾರೂ ದಾನ ಮಾಡಲಾರರು. ಅಲ್ಲಾಹನನ್ನು ಹೊರತುಪಡಿಸಿ ಬೇರೆ ದೇವರು ಇಲ್ಲ ಮತ್ತು ಮುಹಮ್ಮದ್ ಅವನ ಸೇವಕ ಮತ್ತು ಸಂದೇಶವಾಹಕ ಎಂದು ನಾನು ಸಾಕ್ಷಿ ಹೇಳುತ್ತೇನೆ ಮತ್ತು ಅವರು ಹೀಗೆ ಅಲ್ಲಿಯೇ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು."

ಹಝ್ರತ್ ಮುಆವಿಯಾ ಅವರ ಖಿಲಾಫತ್ ಸಮಯದಲ್ಲಿ ಸಫ್ವಾನ್ 42 ಹಿಜ್ರಿಯಲ್ಲಿ ಮಕ್ಕಾದಲ್ಲಿ ನಿಧನರಾದರು. ಕೆಲವರು ಹೇಳುತ್ತಾರೆ,

ಅವರು ಹಝ್ರತ್ ಉಸ್ಮಾನ್(ರ) ಅವರ ಹುತಾತ್ಮತೆಯ ಪ್ರಕ್ಷುಬ್ಧತೆಯ ಸಮಯದಲ್ಲಿ ಅವರು ಹುತಾತ್ಮರಾದರು ಎಂದು.

(ಸಬ್ಲುಲ್ ಹುದಾ ವರ್ರಶಾದ್, ಸಂಪುಟ–5, ಪುಟಗಳು 253–254, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್) (ಸೀರತ್ ಅಲ್–ಹಲಬಿಯಾ, ಸಂಪುಟ–3, ಪುಟಗಳು–135, ದಾರುಲ್ ಕುತುಬ್ ಅಲ್–ಇಲ್ಮಿಯಾ, ಬೈರುತ್) (ಫತಹ್ ಮಕ್ಕ, ಮುಹಮ್ಮದ್ ಬಶ್ಮಿಲ್, ಪುಟಗಳು 321–325, ನಫೀಸ್ ಅಕಾಡೆಮಿ, ಕರಾಚಿ) (ಅಸದುಲ್ ಗ್ಹಾಬಾ, ಸಂಪುಟ 3, ಪುಟಗಳು 24–25, ದಾರುಲ್ ಕುತುಬ್ ಅಲ್–ಇಲ್ಮಿಯ ಬೈರುತ್) (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ–297) (ಇಬ್ನ್ ಹಿಶಾಮ್, ಪುಟ–449, ದಾರುಲ್ ಕುತುಬ್ ಅಲ್–ಇಲ್ಮಿಯ ಬೈರುತ್)

ಮಕ್ಕಾ ವಿಜಯದ ಸಮಯದಲ್ಲಿ ಇಸ್ಲಾಮನ್ನು ಸ್ವೀಕಾರ ಮಾಡಿದ ಈ ಮಕ್ಕಾದ ಮುಖಂಡರು ನಂತರ ತಮ್ಮ ಜೀವನದಲ್ಲಿ ದೊಡ್ಡ ಆಧ್ಯಾತ್ಮಿಕ ಬದಲಾವಣೆಯನ್ನು ಮಾಡಿದ್ದರು.

ಇದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಹೇಳುತ್ತಾರೆ: ಒಮ್ಮೆ ಹಝ್ರತ್ ಉಮರ್(ರ) ತಮ್ಮ ಖಿಲಾಫತ್ ಕಾಲದಲ್ಲಿ ಮಕ್ಕಾಗೆ ಬಂದಾಗ, ಪ್ರಸಿದ್ಧ ಕುಟುಂಬಗಳಿಂದ ಬಂದ ನಗರದ ಮಹಾನ್ ಮುಖ್ಯಸ್ಥರು ಅವರನ್ನು ಭೇಟಿ ಮಾಡಲು ಬಂದರು. ಹಝ್ರತ್ ಉಮರ್(ರ) ನಮ್ಮ ಕುಟುಂಬಗಳನ್ನು ಚೆನ್ನಾಗಿ ತಿಳಿದಿದ್ದಾರೆ ಎಂದು ಅವರು ಭಾವಿಸಿದ್ದರು, ಆದ್ದರಿಂದ ಈಗ ಅವರು ಸ್ವತಃ ರಾಜರಾಗಿರುವುದರಿಂದ, ಅವರು ನಮ್ಮ ಕುಟುಂಬಗಳನ್ನು ಸಹ ಸಂಪೂರ್ಣವಾಗಿ ಗೌರವಿಸುತ್ತಾರೆ ಮತ್ತು ನಾವು ನಮ್ಮ ಕಳೆದುಹೋದ ಗೌರವವನ್ನು ಮರಳಿ ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಅವರು ಬಂದು ಹಝ್ರತ್ ಉಮರ್(ರ.ಅ) ಅವರೊಂದಿಗೆ ಮಾತನಾಡಲು ಪ್ರಾರಂಭಿಸಿದರು. ಅವರು ಮಾತನಾಡುತ್ತಿರುವಾಗ, ಹಝ್ರತ್ ಬಿಲಾಲ್(ರ) ಹಝ್ರತ್ ಉಮರ್(ರ) ಅವರ ಸಭೆಗೆ ಬಂದರು. ಸ್ವಲ್ಪ ಸಮಯದ ನಂತರ, ಹಝ್ರತ್ ಖಬ್ಬಾಬ್(ರ) ಬಂದರು ಮತ್ತು ಈ ರೀತಿಯಾಗಿ, ಒಬ್ಬರ ನಂತರ ಒಬ್ಬರಾಗಿ, ಮೊದಲು ಈಮಾನ್ ತಂದಿದ್ದ ಗುಲಾಮರು ಬಂದರು, ಅಂದರೆ, ಆರಂಭದಲ್ಲಿ ವಿಶ್ವಾಸ ಇಟ್ಟಿದ್ದ ಎಲ್ಲಾ ಗುಲಾಮರು ಒಬ್ಬರ ನಂತರ ಒಬ್ಬರಾಗಿ ಬಂದರು. ಇವರು ಈ ನಾಯಕರ ಅಥವಾ ಅವರ ತಂದೆಯ ಗುಲಾಮರಾಗಿದ್ದರು. ಆದಾಗ್ಯೂ, ನಾಯಕರು ಕುಳಿತಿದ್ದರು. ಅಲ್ಲಿಗೆ ಬಂದ ಈ ಜನರೆಲ್ಲರೂ ಅವರ ತಂದೆ ಮತ್ತು ಅಜ್ಜನ ಗುಲಾಮರಾಗಿದ್ದರು, ನಾನು ಹೇಳಿದಂತೆ, ಅವರು ಗುಲಾಮರಾಗಿದ್ದಾಗ, ಈ ಜನರು ತಮ್ಮ ಅಧಿಕಾರದ ಸಮಯದಲ್ಲಿ ಅವರನ್ನು ತೀವ್ರವಾಗಿ ದಬ್ಬಾಳಿಕೆ ಮಾಡುತ್ತಿದ್ದರು. ಹಝ್ರತ್ ಉಮರ್(ರ) ಪ್ರತಿಯೊಬ್ಬ ಗುಲಾಮನನ್ನು ತನ್ನ ಆಗಮನದ ಸಮಯದಲ್ಲಿ ಸ್ವಾಗತಿಸಿದರು. ಅಂದರೆ, ಗುಲಾಮರು, ಹಿಂದಿನ ಗುಲಾಮರು ಮತ್ತು ಇಂದಿನ ಗೌರವಾನ್ವಿತ ಜನರು, ಅವರು ಅವರನ್ನು ಗೌರವಾನ್ವಿತರು ಎಂದು ಸ್ವಾಗತಿಸಿದರು. ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಬರೆಯುತ್ತಾರೆ, ಹಝ್ರತ್ ಉಮರ್(ರ.ಅ) ಅವರು ಬಂದ ನಂತರ ಪ್ರತಿಯೊಬ್ಬ ಗುಲಾಮನನ್ನು ಗೌರವಾನ್ವಿತರಂತೆ ಸ್ವಾಗತಿಸಿದರು ಮತ್ತು ನಾಯಕರಿಗೆ ಸ್ವಲ್ಪ ಹಿಂದಕ್ಕೆ ಸರಿಯುವಂತೆ ಹೇಳಿದರು. ನಾಯಕರು ಸಭೆಯ ಮುಂಭಾಗದಲ್ಲಿ ಕುಳಿತುಕೊಳ್ಳುತ್ತಿದ್ದರು. ಈ ಹಳೆಯ ಸತ್ಯವಿಶ್ವಾಸಿಗಳು ಬಂದಾಗ, ಹಝ್ರತ್ ಉಮರ್(ರ) ಅವರನ್ನು ಭೇಟಿಯಾಗಲು ಬಂದ ಯುವ ಮುಖ್ಯಸ್ಥರು ಸ್ಥಳಾಂತರಗೊಂಡು ಬಾಗಿಲನ್ನು ತಲುಪುವವರೆಗೆ ಅವರು ಮಕ್ಕಾದ ಮುಖ್ಯಸ್ಥರಾಗಿದ್ದ ಮುಖ್ಯಸ್ಥರನ್ನು ಹಿಂದೆ ಸರಿಸಿ ಮುಂದೆ ಕುಳಿತುಕೊಳ್ಳಲು ಹೇಳುತ್ತಿದ್ದರು. ಆ ದಿನಗಳಲ್ಲಿ, ದೊಡ್ಡ ಸಭಾಂಗಣಗಳು ಇರಲಿಲ್ಲ, ಕೇವಲ ಒಂದು ಸಣ್ಣ ಕೋಣೆ ಮಾತ್ರ, ಮತ್ತು ಅವರೆಲ್ಲರೂ ಅದರಲ್ಲಿ ಹೊಂದಿಕೊಳ್ಳಲು ಸಾಧ್ಯವಾಗದ ಕಾರಣ, ಮುಖ್ಯಸ್ಥರು ಹಿಂದಕ್ಕೆ ಸರಿದು ಪಾದರಕ್ಷೆಗಳಲ್ಲಿ ಕುಳಿತುಕೊಳ್ಳಬೇಕಾಗಿತ್ತು. ಮಕ್ಕಾದ ಆ ಮುಖ್ಯಸ್ಥರು ಪಾದರಕ್ಷೆಗಳನ್ನು ತಲುಪಿದಾಗ ಒಬ್ಬರ ನಂತರ ಒಬ್ಬರು ಮುಸ್ಲಿಂ ಗುಲಾಮರು ಹೇಗೆ ಬರುತ್ತಾರೆ ಎಂಬುದನ್ನು ತಮ್ಮ ಕಣ್ಣುಗಳಿಂದ ನೋಡಿದಾಗ ಮತ್ತು ಈ ಜನರು ಅಥವಾ ಮುಖ್ಯಸ್ಥರು ಅವರನ್ನು ಮುಂದೆ ಕುಳಿತುಕೊಳ್ಳುವಂತೆ ಹಿಂದಕ್ಕೆ ಹೆಜ್ಜೆ ಹಾಕಲು ಆದೇಶಿಸಿದಾಗ, ಅವರ ಹೃದಯಗಳು ತೀವ್ರವಾಗಿ ನೋಯುತ್ತಿದ್ದವು. ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಬರೆಯುತ್ತಾರೆ, ಆ ಸಮಯದಲ್ಲಿ ಸರ್ವಶಕ್ತನಾದ ಅಲ್ಲಾಹನು ಸಹ ಅಂತಹ ಕೆಲವು ವಿಷಯಗಳನ್ನು ಸೃಷ್ಟಿಸಿದನು, ಒಂದು ಕಾಲದಲ್ಲಿ ಅವಿಶ್ವಾಸಿಗಳ ಗುಲಾಮರಾಗಿದ್ದ ಅನೇಕ ಮುಸ್ಲಿಮರು ಒಬ್ಬರ ನಂತರ ಒಬ್ಬರಂತೆ ಬಂದರು. ಆ ನಾಯಕರು ಒಮ್ಮೆ ಮಾತ್ರ ಹಿಂದೆ ಸರಿದಿದ್ದರೆ, ಅವರಿಗೆ ಅದು ಅರಿವಾಗುತ್ತಿರಲಿಲ್ಲ, ಆದರೆ ಅವರು ಮತ್ತೆ ಮತ್ತೆ ಹಿಂದೆ ಸರಿಯಬೇಕಾಗಿರುವುದರಿಂದ, ಅವರು ಅದನ್ನು ಸಹಿಸಲಾರದೆ ಎದ್ದು ಹೊರಗೆ ಹೋದರು. ಅವರು ಹೊರಗೆ ಬಂದಾಗ, ಅವರು ಒಬ್ಬರಿಗೊಬ್ಬರು ದೂರು ನೀಡಲು ಪ್ರಾರಂಭಿಸಿದರು, "ಇಂದು ನಾವು ಎಷ್ಟು ಅವಮಾನಿತರಾಗಿದ್ದೇವೆ ಮತ್ತು ಅವಮಾನಿತರಾಗಿದ್ದೇವೆ ಎಂದು ನೋಡಿ. ಪ್ರತಿಯೊಬ್ಬ ಗುಲಾಮರು ಬಂದಾಗ ನಾವು ಪಾದರಕ್ಷೆಗಳನ್ನು ತಲುಪುವವರೆಗೂ ನಮ್ಮನ್ನು ಒಬ್ಬೊಬ್ಬರಾಗಿ ಹಿಂದಕ್ಕೆ ತಳ್ಳಲಾಯಿತು." ಇದರ ಬಗ್ಗೆ, ಯುವಕರಲ್ಲಿ ಒಬ್ಬನು ಹೇಳಿದನು, "ಇದು ಯಾರ ತಪ್ಪು? ಅದು ಉಮರ್ ಅವರದ್ದೋ ಅಥವಾ ನಮ್ಮ ತಂದೆಯದ್ದೋ? ನೀವು ಅದರ ಬಗ್ಗೆ ಯೋಚಿಸಿದರೆ, ಹಝ್ರತ್ ಉಮರ್(ರ) ಇದರಲ್ಲಿ ಯಾವುದೇ ತಪ್ಪಿಲ್ಲ ಎಂದು ನಿಮಗೆ ತಿಳಿಯುತ್ತದೆ. ಇಂದು ನಮಗೆ ಶಿಕ್ಷೆ ವಿಧಿಸಿರುವುದು ನಮ್ಮ ಪಿತೃಗಳ ತಪ್ಪಿನಿಂದಲೇ, ಏಕೆಂದರೆ ದೇವರು ತನ್ನ ಸಂದೇಶವಾಹಕರನ್ನು ಕಳುಹಿಸಿದಾಗ, ನಮ್ಮ ಪಿತೃಗಳು ಅವರನ್ನು ವಿರೋಧಿಸಿದರು, ಆದರೆ ಈ ಗುಲಾಮರು ಅವರನ್ನು ಸ್ವೀಕರಿಸಿದರು ಮತ್ತು ಎಲ್ಲಾ ರೀತಿಯ ನೋವುಗಳನ್ನು ಸಂತೋಷದಿಂದ ಸಹಿಸಿಕೊಂಡರು." ಆದ್ದರಿಂದ, ಇಂದು ನಾವು ಸಭೆಯಲ್ಲಿ ಅವಮಾನಿತರಾಗಬೇಕಾದರೆ, ಅದು ಉಮರ್(ರ) ಅವರ ತಪ್ಪಲ್ಲ, ಅದು ನಮ್ಮದೇ ತಪ್ಪು. ಇದನ್ನು ಕೇಳಿದ ಇತರರು, "ಇದು ನಮ್ಮ ಪೂರ್ವಜರ ತಪ್ಪಿನ ಪರಿಣಾಮ ಎಂದು ನಾವು ಒಪ್ಪಿಕೊಂಡಿದ್ದೇವೆ, ಆದರೆ ಈ ಅವಮಾನವನ್ನು ತೆಗೆದುಹಾಕಲು ಯಾವುದೇ ಮಾರ್ಗವಿದೆಯೇ?" ಅವರೆಲ್ಲರೂ ತಮ್ಮೊಳಗೆ ಸಮಾಲೋಚಿಸಿದರು ಮತ್ತು "ನಮಗೆ ಏನೂ ಅರ್ಥವಾಗುತ್ತಿಲ್ಲ. ಇದಕ್ಕೆ ಪರಿಹಾರವೇನು ಎಂದು ಹಝ್ರತ್ ಉಮರ್(ರ.ಅ) ಅವರನ್ನು ಕೇಳೋಣ." ಆದ್ದರಿಂದ ಅವರು ಹಝ್ರತ್ ಉಮರ್(ರ.ಅ) ರವರ ಬಳಿಗೆ ಬಂದು ಹೇಳಿದರು, "ಇಂದು ನಮಗೆ ಏನಾಯಿತು ಎಂದು ನಿಮಗೆ ಚೆನ್ನಾಗಿ ತಿಳಿದಿದೆ ಮತ್ತು ನಮಗೆ ಚೆನ್ನಾಗಿ ತಿಳಿದಿದೆ." ಹಝ್ರತ್ ಉಮರ್(ರ.ಅ) ಹೇಳಿದರು, "ಇವರು ಹಝ್ರತ್ ಪೈಗಂಬರ್(ಸ.ಅ) ರವರ ಸಭೆಯಲ್ಲಿ ಗೌರವಿಸಲ್ಪಟ್ಟ ಜನರು ಆಗಿದ್ದರಿಂದ ನಾನು ಕ್ಷಮಿಸಬೇಕಾಯಿತು. ಅವರು ನಿಮ್ಮ ಗುಲಾಮರಾಗಿರಬಹುದು, ಆದರೆ ಈ ಜನರು ಹಝ್ರತ್ ಪೈಗಂಬರ್(ಸ.ಅ) ರವರ ಸಭೆಯಲ್ಲಿ ಗೌರವಿಸಲ್ಪಟ್ಟರು. ಆದ್ದರಿಂದ, ಅವರನ್ನು ಗೌರವಿಸುವುದು ನನ್ನ ಕರ್ತವ್ಯವಾಗಿತ್ತು." ಅವರು ಹೇಳಿದರು, "ನಮಗೆ ತಿಳಿದಿದೆ. ಇದು ನಮ್ಮದೇ ಆದ ತಪ್ಪಿನ ಪರಿಣಾಮ, ಆದರೆ ಈ ಅವಮಾನವನ್ನು ತೆಗೆದುಹಾಕಲು ಯಾವುದೇ ಮಾರ್ಗವಿದೆಯೇ?" ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ಹೇಳುತ್ತಾರೆ, "ಆ ಯುಗದಲ್ಲಿ ನಾವು ಇಂದು ಇಲ್ಲಿ ಕುಳಿತಿರುವುದನ್ನು ನಾವು ಊಹಿಸಲು ಸಾಧ್ಯವಿಲ್ಲ." ಮಕ್ಕಾದ ನಾಯಕರಾಗಿದ್ದವರು ಮಕ್ಕಾದಲ್ಲಿ ಎಷ್ಟು ಪ್ರಭಾವ ಬೀರಿದ್ದರು ಎಂಬುದನ್ನು ಇಂದು ಅಂದಾಜು ಮಾಡುವುದು ತುಂಬಾ ಕಷ್ಟ, ಆದರೆ ಹಝ್ರತ್ ಉಮರ್(ರ) ಅವರ ಕುಟುಂಬದ ಪರಿಸ್ಥಿತಿಗಳನ್ನು ಚೆನ್ನಾಗಿ ತಿಳಿದಿದ್ದರು. ಅವರು ಮಕ್ಕಾದಲ್ಲಿ ಜನಿಸಿದರು ಮತ್ತು ಮಕ್ಕಾದಲ್ಲಿ ಬೆಳೆದರು. ಆದ್ದರಿಂದ, ಈ ಯುವಕರ ಪಿತೃಗಳು ಎಷ್ಟು ಗೌರವವನ್ನು ಹೊಂದಿದ್ದಾರೆಂದು ಹಝ್ರತ್ ಉಮರ್(ರ) ಅವರಿಗೆ ತಿಳಿದಿತ್ತು. ಅವರ ಮುಂದೆ ಯಾರೂ ಕಣ್ಣು ಎತ್ತುವ ಧೈರ್ಯ ಮಾಡುವುದಿಲ್ಲ ಎಂದು ಹಝ್ರತ್ ಉಮರ್(ರ) ಅವರಿಗೆ ತಿಳಿದಿತ್ತು. ಅವರಿಗೆ ಎಷ್ಟು ಭಯ ಮತ್ತು ಶಕ್ತಿ ಇದೆ ಎಂದು ಅವರಿಗೆ ತಿಳಿದಿತ್ತು. ಅವರು ಇದನ್ನು ಹೇಳಿದಾಗ, ಈ ಎಲ್ಲಾ ಘಟನೆಗಳು ಒಂದೊಂದಾಗಿ ಹಝ್ರತ್ ಉಮರ್(ರ)ಗೆ ಬಂದವು ಮತ್ತು ಅವರು ಕರುಣೆಯಿಂದ ತುಂಬಿಹೋದರು. ಆ ಸಮಯದಲ್ಲಿ, ಕರುಣೆಯ ಪ್ರಾಬಲ್ಯದಿಂದಾಗಿ ಅವರು ಮಾತನಾಡಲು ಸಹ ಸಾಧ್ಯವಾಗಲಿಲ್ಲ. ಅವರು ಕೇವಲ ಕೈಯನ್ನು ಮೇಲಕ್ಕೆತ್ತಿ ತನ್ನ ಬೆರಳಿನಿಂದ ಉತ್ತರದ ಕಡೆಗೆ ತೋರಿಸಿದರು, ಇದರರ್ಥ ಉತ್ತರದಲ್ಲಿ, ಅಂದರೆ ಸಿರಿಯಾದಲ್ಲಿ ಕೆಲವು ಇಸ್ಲಾಮಿಕ್ ಯುದ್ಧಗಳು ನಡೆಯುತ್ತಿವೆ. ನೀವು ಆ ಯುದ್ಧಗಳಲ್ಲಿ ಸೇರಿಕೊಂಡರೆ, ಅದು ಅದಕ್ಕೆ ಪ್ರಾಯಶ್ಚಿತ್ತವಾಗುವ ಸಾಧ್ಯತೆಯಿದೆ. ಆದ್ದರಿಂದ ಅವರು ಅಲ್ಲಿಂದ ಎದ್ದು ಶೀಘ್ರದಲ್ಲೇ ಈ ಯುದ್ಧಗಳಲ್ಲಿ ಸೇರಲು ಹೊರಟರು. ಆ ಮುಖಂಡರ ಪುತ್ರರಲ್ಲಿ ಯಾರೂ ಜೀವಂತವಾಗಿ ಹಿಂದಿರುಗಲಿಲ್ಲ ಮತ್ತು ಎಲ್ಲರೂ ಅಲ್ಲೇ ಹುತಾತ್ಮರಾದರು ಎಂದು ಚರಿತ್ರೆ ಹೇಳುತ್ತದೆ. ಈ ರೀತಿಯಾಗಿ ಅವರು ತಮ್ಮ ಕುಟುಂಬಗಳ ಮೇಲಿದ್ದ ಅವಮಾನದ ಕಳಂಕವನ್ನು ಅಳಿಸಿದರು. (ತಫ್ಸೀರ್ ಕಬೀರ್, ಸಂಪುಟ 11, ಪುಟಗಳು 97–99)

ಯರ್ಮೌಕ್ ಯುದ್ಧದಲ್ಲಿ ಈ ನಾಯಕರು ಶ್ಲಾಘನೀಯ ಧೈರ್ಯ ಮತ್ತು ತ್ಯಾಗವನ್ನು ಪ್ರದರ್ಶಿಸಿದರು ಎಂದು ವರದಿಯಾಗಿದೆ. ಹೀಗಾಗಿ, ಯುದ್ಧ ಮುಗಿದ ನಂತರ, ಮುಸ್ಲಿಮರು ವಿಶೇಷವಾಗಿ ಇಕ್ರಿಮಾ ಮತ್ತು ಅವರ ಸಹಚರರನ್ನು ಹುಡುಕಿದರು ಮತ್ತು ಇಕ್ರಿಮಾ ಸೇರಿದಂತೆ ಹನ್ನೆರಡು ಜನರು ಗಂಭೀರವಾಗಿ ಗಾಯಗೊಂಡಿರುವುದನ್ನು ಕಂಡುಕೊಂಡರು ಎಂದು ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ವರದಿ ಮಾಡಿದ್ದಾರೆ. ಒಬ್ಬ ಮುಸ್ಲಿಂ ಸೈನಿಕ ಅವನ ಬಳಿಗೆ ಬಂದು ಇಕ್ರಿಮಾನ ಸ್ಥಿತಿಯನ್ನು ನೋಡಿದನು. ಅವನು ತುಂಬಾ ಗಂಭೀರ ಸ್ಥಿತಿಯಲ್ಲಿದ್ದರು. ಅವನು ಹೇಳಿದನು: ಓ

ಇಕ್ರಿಮಾ! ನನ್ನ ಬಳಿ ಒಂದು ಬುಗ್ಗಸೆ ನೀರು ಇದೆ, ಸ್ವಲ್ಪ ನೀರು ಕುಡಿಯಿರಿ. ಇಕ್ರಿಮಾ ತನ್ನ ಮುಖವನ್ನು ತಿರುಗಿಸಿ ನೋಡಿದಾಗ ಹಝ್ರತ್ ಅಬ್ಬಾಸ್ ಅವರ ಪುತ್ರ ಹಝ್ರತ್ ಫಝ್ಲ್ ಹತ್ತಿರದಲ್ಲಿ ಗಾಯಗೊಂಡು ಮಲಗಿರುವುದನ್ನು ನೋಡಿದರು. ಇಕ್ರಿಮಾ ಆ ಮುಸಲ್ಮಾನನಿಗೆ ಹೇಳಿದರು, "ನಾನು ನಿನ್ನ ಉಗ್ರ ಎದುರಾಳಿಯಾಗಿದ್ದಾಗ ಹಝ್ರತ್ ಪೈಗಂಬರ್(ಸ)ರಿಗೆ ಸಹಾಯ ಮಾಡಿದವರು ಬಾಯಾರಿಕೆಯಿಂದ ಸತ್ತರೆ, ನಾನು ನೀರು ಕುಡಿದು ಬದುಕಬೇಕು ಎಂಬುದನ್ನು ನನ್ನ ಆತ್ಮವು ಸಹಿಸುವುದಿಲ್ಲ. ಅವರಲ್ಲಿ ಒಬ್ಬರಿಗೊಬ್ಬರು ತ್ಯಾಗದ ಹೊಸ ಮನೋಭಾವ ಹುಟ್ಟಿತು. ಆದ್ದರಿಂದ, ಮೊದಲು ಅವರಿಗೆ, ಅಂದರೆ ಹಝ್ರತ್ ಫಝ್ಲ್ ಬಿನ್ ಅಬ್ಬಾಸ್‌ಗೆ ಕುಡಿಯಲು ನೀರು ನೀಡಿ, ಮತ್ತು ಏನಾದರೂ ಉಳಿದಿದ್ದರೆ, ಅದನ್ನು ನನಗೆ ತನ್ನಿ." ಆ ಮುಸ್ಲಿಮನು ಹಝ್ರತ್ ಫಝ್ಲ್ ಬಳಿಗೆ ಹೋದರು. ಅವರು ಮುಂದಿನ ಗಾಯಗೊಂಡ ವ್ಯಕ್ತಿಯನ್ನು ತೋರಿಸಿದರು ಮತ್ತು ಹೇಳಿದರು, "ಮೊದಲು ಅವರಿಗೆ ನೀರು ಕೊಡಿ. ಅವನು ನನಗಿಂತ ಹೆಚ್ಚು ಅರ್ಹನು." ಅವರು ಈ ಗಾಯಾಳು ವ್ಯಕ್ತಿಯ ಬಳಿಗೆ ಹೋದಾಗ, ಅವರು ಮುಂದಿನ ಗಾಯಗೊಂಡ ವ್ಯಕ್ತಿಯನ್ನು ತೋರಿಸಿದರು ಮತ್ತು "ಮೊದಲು ಅವನಿಗೆ ನೀರು ಕೊಡಿ" ಎಂದು ಹೇಳಿದರು. ಈ ರೀತಿಯಾಗಿ, ಅವನು ಯಾವ ಸೈನಿಕನ ಬಳಿಗೆ ಹೋದರೂ, ಅವನು ಅವನನ್ನು ಇನ್ನೊಬ್ಬನಿಗೆ ಕಳುಹಿಸುತ್ತಿದ್ದನು ಮತ್ತು ಯಾರೂ ಕುಡಿಯುತ್ತಿರಲಿಲ್ಲ. ಅವನು ಕೊನೆಯ ಗಾಯಗೊಂಡ ವ್ಯಕ್ತಿಯನ್ನು ತಲುಪಿದಾಗ, ಅವನು ಮೃತನಾಗಿದ್ದನು. ಅವನು ಇಕ್ರಿಮಾ ತಲುಪುವವರೆಗೆ ಅವನು ಇತರರ ಬಳಿಗೆ ಹಿಂತಿರುಗಿದನು, ಆದರೆ ಅವರೆಲ್ಲರೂ ಮೃತರಾಗಿದ್ದರು.

(ಪ್ರತಿಯೊಬ್ಬ ಅಹ್ಮದಿ ಮಹಿಳೆಯೂ ಅಹ್ಮದಿಯ್ಯತ್‌ನ ಸತ್ಯದ ಜೀವಂತ ಸಂಕೇತ, ಅನ್ವರ್-ಉಲ್-ಉಲೂಮ್, ಸಂಪುಟ. 26, ಪುಟಗಳು. 230-231)

ಹಝ್ರತ್ ಪೈಗಂಬರ್(ಸ) ಜನರನ್ನು ಅಲ್ಲಾಹನ ಕಡೆಗೆ ಆಹ್ವಾನಿಸಲು (ದಅವತ್ ಇಲಲ್ಲಾಹ್) ಮತ್ತು ಕೆಲವು ದೊಡ್ಡ ವಿಗ್ರಹಗಳ ನಾಶಕ್ಕಾಗಿ ತುಕಡಿಗಳನ್ನು ನೇಮಿಸಿದ್ದರು. ಅವರು ಅವರನ್ನು ಕಳುಹಿಸಿದರು. ಮಕ್ಕಾ ವಿಜಯದ ನಂತರ, ಹಝ್ರತ್ ಪೈಗಂಬರ್(ಸ) ವಿವಿಧ ಸ್ಥಳಗಳಿಗೆ ತುಕಡಿಗಳನ್ನು ಕಳುಹಿಸಿದರು ಎಂದು ಉಲ್ಲೇಖಿಸಲಾಗಿದೆ. ಇವು ಪ್ರಾಥಮಿಕವಾಗಿ ಹೋರಾಟಕ್ಕಾಗಿ ಅಲ್ಲ. ಜನರನ್ನು ಅಲ್ಲಾಹನ ಕಡೆಗೆ ಆಹ್ವಾನಿಸುವ ಸಂದೇಶವನ್ನು ತಿಳಿಸುವುದು ಮತ್ತು ಏಕದೇವೋಪಾಸನೆಯನ್ನು ನಂಬಲು ಅಡ್ಡಿಯಾಗಿರುವ ಕೆಲವು ಸ್ಥಳಗಳಲ್ಲಿ ನಿರ್ಮಿಸಲಾದ ವಿಗ್ರಹಗಳನ್ನು ಕೆಡವುವುದು ಅವರ ಉದ್ದೇಶವಾಗಿತ್ತು. ಇದರ ಕಾಲ್ಪನಿಕ ಮತ್ತು ಕೃತಕ ಭಯವು ಜನರ ಹೃದಯಗಳಲ್ಲಿ ಬೇರೂರಿತ್ತು ಮತ್ತು ಅವರ ಈ ಕಲ್ಪನೆಯು ಒಬ್ಬನೇ ದೇವರನ್ನು ನಂಬಲು ಅಡ್ಡಿಯಾಗಿತ್ತು. ಬಹುಪಾಲು ಅರಬ್ಬರ ಹೃದಯಗಳಲ್ಲಿ, ಮೂರು ವಿಗ್ರಹಗಳು ಅಥವಾ ದೇವತೆಗಳು ಬಹಳ ದೊಡ್ಡವರಾಗಿದ್ದರು. ಅವರ ಹೆಸರುಗಳು ಲಾತ್, ಮನಾತ್ ಮತ್ತು ಉಝ್ಝಾ ಎಂದಾಗಿತ್ತು.

**ಲಾತ್:** ಈ ದೇವತೆ ತಾಯಿಫ್‌ನಲ್ಲಿದ್ದಳು ಮತ್ತು ಅರೇಬಿಯಾದಾದ್ಯಂತ ಪೂಜಿಸಲ್ಪಟ್ಟಳು ಮತ್ತು ಶ್ರೇಷ್ಠಳಾಗಿದ್ದಳು. ಜನರು ಅದರ ಹೆಸರಿನ ಮೇಲೆ ಪ್ರಮಾಣ ಮಾಡಿ ಅದಕ್ಕೆ ಬಲಿದಾನ ಮಾಡುತ್ತಿದ್ದರು. ಅರಬ್ಬರಲ್ಲಿ ವಿಗ್ರಹಾರಾಧನೆಯ ಸ್ಥಾಪಕ ಎಂದು ಪರಿಗಣಿಸಲಾದ ಅಮ್ರ್ ಇಬ್ನ್ ಲುಹಯ್ಯ್, ಅಲ್ಲಾಹನು, ನೌಝುಬಿಲ್ಲಾಹ್, ಚಳಿಗಾಲವನ್ನು ಲಾತ್ ಬಳಿಯ ತಾಯಿಫ್‌ನಲ್ಲಿ ಮತ್ತು ಬೇಸಿಗೆಯನ್ನು ಉಜ್ಜಾದಲ್ಲಿ ಕಳೆಯುತ್ತಾನೆ ಎಂಬ ಕಲ್ಪನೆಯನ್ನು ಜನರ ಹೃದಯದಲ್ಲಿ ಸೃಷ್ಟಿಸಿದ್ದನು.

**ಮನಾತ್:** ಇದು ಅರಬ್ಬರ ಅತ್ಯಂತ ಹಳೆಯ ವಿಗ್ರಹವಾಗಿತ್ತು. ಇದು ಮಕ್ಕಾ ಮತ್ತು ಮದೀನಾ ನಡುವಿನ ಖುದೈದ್ ಕರಾವಳಿಯಲ್ಲಿದೆ. ಅರಬ್ಬರು ಇದನ್ನು ಪೂಜಿಸುತ್ತಿದ್ದರು ಮತ್ತು ಅದಕ್ಕೆ ಬಲಿದಾನಗಳನ್ನು ಅರ್ಪಿಸುತ್ತಿದ್ದರು. ಅವ್ಸ್ ಮತ್ತು ಖಝ್ರುಜ್ ಇದನ್ನು ವಿಶೇಷವಾಗಿ ಪೂಜಿಸುತ್ತಿದ್ದರು, ಅವರು ಮನಾತ್ ಹೆಸರಿನಲ್ಲಿ ಇಹ್ರಾಮ್ ಧರಿಸುತ್ತಿದ್ದರು. ಅದರ ಶ್ರೇಷ್ಠತೆ ಮತ್ತು ಪೂಜೆಯನ್ನು ಗಮನದಲ್ಲಿಟ್ಟುಕೊಂಡು, ಅವರು ಸಫಾ ಮತ್ತು ಮರ್ವಾ ನಡುವೆ ಸ'ಯಿ ಕೂಡ ಮಾಡುತ್ತಿರಲಿಲ್ಲ. ಅವರು ಹಜ್ ಮಾಡಿದಾಗ, ಅವರು ತಮ್ಮ ತಲೆಗಳನ್ನು ಬೋಳಿಸಿಕೊಳ್ಳುತ್ತಿರಲಿಲ್ಲ, ಆದರೆ ಹಿಂದಿರುಗಿದಾಗ ಮನಾತ್‌ಗೆ ಬಂದು ಅಲ್ಲಿ ತಲೆ ಬೋಳಿಸಿಕೊಳ್ಳುತ್ತಿದ್ದರು, ಅಲ್ಲಿಯೇ ಇರುತ್ತಿದ್ದರು ಮತ್ತು ಅದು ಇಲ್ಲದೆ ತಮ್ಮ ಹಜ್ ಪೂರ್ಣಗೊಂಡಿದೆ ಎಂದು ಪರಿಗಣಿಸುತ್ತಿರಲಿಲ್ಲ.

**ಉಝ್ಝಾ:** ಇದು ಖುರೈಶ್‌ಗಳ ಅತಿದೊಡ್ಡ ವಿಗ್ರಹವಾಗಿದ್ದು, ಇದನ್ನು ತಾಳೆ ಮರದ ಬಳಿ ಸ್ಥಾಪಿಸಲಾಗಿತ್ತು. ಅವರು ಅದಕ್ಕಾಗಿ ಒಂದು ಬಲಿಪೀಠವನ್ನು ಸಹ ನಿರ್ಮಿಸಿದರು, ಅದರಲ್ಲಿ ಅವರು ತಮ್ಮ ತ್ಯಾಗಗಳನ್ನು ಅರ್ಪಿಸುತ್ತಿದ್ದರು. ಅವರು ತಮ್ಮ ಜನರಿಗೆ ಅದರ ಹೆಸರನ್ನು ಇಡುತ್ತಿದ್ದರು ಮತ್ತು ಅದರ ಮೇಲೆ ಪ್ರಮಾಣ ಮಾಡುತ್ತಿದ್ದರು. ಅರಬ್ಬರಲ್ಲಿ ವಿಗ್ರಹಾರಾಧನೆಯ ಸ್ಥಾಪಕ ಎಂದು ಪರಿಗಣಿಸಲಾದ ಅಮ್ರ್ ಇಬ್ನ್ ಲುಹಾಯಿ, ಜನರ ಹೃದಯದಲ್ಲಿ ವಿಗ್ರಹಗಳ ಬಗ್ಗೆ ಬಲವಾದ ತಪ್ಪು ಕಲ್ಪನೆಯನ್ನು ಸೃಷ್ಟಿಸಿದ್ದನು, ಜನರು ಈ ವಿಗ್ರಹಗಳಿಗೆ ತುಂಬಾ ಹೆದರುತ್ತಿದ್ದರು ಮತ್ತು ಅವುಗಳನ್ನು ತುಂಬಾ ಗೌರವಿಸುತ್ತಿದ್ದರು, ನಾನು ಮೊದಲೇ ಹೇಳಿದಂತೆ. ಅಲ್ಲಾಹನು, ನೌಝುಬಿಲ್ಲಾಹ್, ಈ ವಿಗ್ರಹಗಳ ಬಳಿ ವಿಭಿನ್ನ ಋತುಗಳನ್ನು ಕಳೆದಿದ್ದಾನೆ ಎಂದು ಅವರು ನಂಬಿದ್ದರು. ಆದಾಗ್ಯೂ, ಅಂತಹ ವಿಚಾರಗಳು ಜನರಲ್ಲಿ ಉಝ್ಝಾ ದೇವತೆಯ ಶ್ರೇಷ್ಠತೆಯನ್ನು ಸೃಷ್ಟಿಸಿದವು, ಕಾಬಾಗೆ ಉಡುಗೊರೆಗಳು ಮತ್ತು ಕಾಣಿಕೆಗಳನ್ನು ತಂದಂತೆಯೇ, ಅವರು ಅವುಗಳನ್ನು ಉಝ್ಝಾಗೆ ಕರೆದೊಯ್ಯಲು ಪ್ರಾರಂಭಿಸಿದರು. ಅಬು ಸುಫ್ಯಾನ್ ಉಹುದ್ ಯುದ್ಧದ ವಿಜಯದಲ್ಲಿ ಸಂತೋಷದಿಂದ ಉಲ್ಲೇಖಿಸಿದ ಅದೇ ವಿಗ್ರಹ ಇದಾಗಿದೆ, ಅದರ ಹೆಸರನ್ನು ಅತೆಗೆದುಕೊಂಡು ಹೀಗೆ ಹೇಳುತ್ತಿದ್ದನು: **ಇನ್ನ ಲನಲ್‌ಉಝ್ಝಾ ವಲಾ ಉಝ್ಝಾಲಕುಮ್** ವಾಸ್ತವವಾಗಿ, ನಮಗೆ 'ಉಝ್ಝಾ ಮತ್ತು ನಿಮಗೆ' ಉಜ್ಜಾ ಅಲ್ಲ.

ಹೀಗೆ, ಅರಬ್ಬರು ಸಾಮಾನ್ಯವಾಗಿ ಈ ಮೂರು ವಿಗ್ರಹಗಳನ್ನು ಪೂಜಿಸುತ್ತಿದ್ದರು, ಆದಾಗ್ಯೂ, 'ಉಝ್ಝಾ ಖುರೈಶ್‌ಗಳಿಗೆ ನಿರ್ದಿಷ್ಟವಾಗಿತ್ತು. ಲಾತ್ ಬನು ಸಖೀಫ್‌ಗೆ ನಿರ್ದಿಷ್ಟವಾಗಿತ್ತು ಮತ್ತು ಮನಾತ್ ಅವ್ಸ್ ಮತ್ತು ಖಝ್ರುಜ್‌ಗೆ ನಿರ್ದಿಷ್ಟವಾಗಿತ್ತು. ಅರಬ್ಬರ ಪರಿಕಲ್ಪನೆಯ ಪ್ರಕಾರ, ಈ ಮೂವರು ಸ್ತ್ರೀಲಿಂಗರಾಗಿದ್ದರು, ಅಂದರೆ ಅವರು ದೇವತೆಗಳಾಗಿದ್ದರು.

(ಅಲ್-ಲುಲುಲ್ ಮಕ್ನೂನ್ ಜೀವನಚರಿತ್ರೆ ವಿಶ್ವಕೋಶ, ಸಂಪುಟ 9, ಪುಟಗಳು 202-203, 207, ದಾರುಸ್ಸಲಾಮ್) (ಅಲ್-ಲುಲುಲ್-ಮಕ್ನೂನ್ ಜೀವನಚರಿತ್ರೆ ವಿಶ್ವಕೋಶ ಸಂಪುಟ 1, ಪುಟ 346, ದಾರುಸ್ಸಲಾಮ್) (ಉಬೈದುಲ್ಲಾ ಕುದ್ಸಿಯವರ ಇಸ್ಲಾಮಿಕ್ ಪೂರ್ವ ಅರಬ್ ಪರಿಕಲ್ಪನೆಗಳು, ಪುಟಗಳು 52 ರಿಂದ 55) (ಇಬ್ನ್ ಹಿಶಾಮ್, ಪುಟ 77, ದಾರ್ ಅಲ್-ಕುತುಬ್ ಅಲ್-ಇಲ್ಮಿಯಾ, ಬೈರುತ್) (ಸಹೀಹ್ ಅಲ್-ಬುಖಾರಿ, ಕಿತಾಬುಲ್ ಜಿಹಾದ್, ಹದೀಸ್ 3039)

ಈ ಮೂವರನ್ನು ಉಲ್ಲೇಖಿಸಿ ಪವಿತ್ರ ಖುರ್‌ಆನ್ ಹೀಗೆ ಹೇಳುತ್ತದೆ: **ಅಫರಯ್‌ತುಮುಲ್ಲಾತ ವಲ್ ಉಝ್ಝಾ. ವಮನಾತಸ್ಸಾಲಿಸತಲ್ ಉಖ್ರಾ. ಅಲಕುಮುಝ್ಝಕರು ವಲಹುಲ್ ಉನ್‌ಸಾ. ತಿಲ್‌ಕ ಇಝನ್ ಖಿಸ್ಮತುನ್ ಝೀಝಾ. ಇನ್ ಹಿಯಾ ಇಲ್ಲಾ ಅಸ್ಮಾಉನ್ ಸಮ್ಮೈತುಮೂಹಾ ಅನ್‌ತುಮ್ ವ ಆಬಾಉಕುಮ್ ಮಾಅನ್‌ಝಲಲ್ಲಾಹು ಬಿಹಾ ಮಿನ್ ಸುಲ್ತಾನ್, ಇಂಯತ್ತಬಿಊನ ಇಲ್ಲಝ್ಝನ್ನ ವಮಾ ಯಹ್‌ವಲ್ ಅನ್‌ಫುಸು, ವಲಖದ್ ಜಾಅಹುಮ್ ಮಿನ್ ರಬ್ಬಿಹಿಮುಲ್ ಹುದಾ.** (ಅನ್ನಜಮ್: 20-24)

ಇನ್ನು ಲಾತ್ ಮತ್ತು ಉಝ್ಝಾ ಕುರಿತು ನೀವು ಚಿಂತಿಸಿದ್ದೀರಾ. ಹಾಗೂ ಮನಾತ್ ಎಂಬ ಮೂರನೆಯದನ್ನು? ಏನು, ನಿಮಗೆ ಪುತ್ರರು ಮತ್ತು ಅವನಿಗೆ (ಅಲ್ಲಾಹನಿಗೆ) ಪುತ್ರಿಯರೇ? ಹಾಗಿದ್ದರೆ ನಿಜವಾಗಿಯೂ ಅದೊಂದು ಅನ್ಯಾಯದ ವಿಂಗಡನೆಯಾಗಿದೆ. ಇವು ನೀವು ಮತ್ತು ನಿಮ್ಮ ಪೂರ್ವಜರು ಹೆಸರಿಸಿದ ಕೆಲವು ನಾಮಗಳು ಮಾತ್ರ ಆಗಿವೆ. ಅವುಗಳ ಬಗ್ಗೆ ಯಾವುದೇ ಸಾಕ್ಷ್ಯಾಧಾರವನ್ನು ಅಲ್ಲಾಹನು ಅವತೀರ್ಣಗೊಳಿಸಿಲ್ಲ. ಊಹಾಪೋಹಗಳನ್ನು ಮತ್ತು ಸ್ವೇಚ್ಛೆಗಳನ್ನು ಮಾತ್ರ ಅವರು ಅನುಸರಿಸುತ್ತಾರೆ. ಆದರೆ ಅವರಿಗೆ ತಮ್ಮ ಪ್ರಭುವಿನಿಂದ ಈಗಾಗಲೇ ಮಾರ್ಗದರ್ಶನ ಬಂದಿರುತ್ತದೆ.

ಆದಾಗ್ಯೂ, ಹೇಳಿರುವಂತೆ, ಮಕ್ಕಾ ವಿಜಯದ ನಂತರ ತಕ್ಷಣವೇ, ಜನರ ಹೃದಯಗಳಿಂದ ವಿಗ್ರಹಗಳ ಕಲ್ಪಿತ ಭಯವನ್ನು ನೀಗಿಸಲಿಕ್ಕಾಗಿ ವಿಗ್ರಹಗಳ ಸ್ಥಳಗಳನ್ನು ನಾಶಪಡಿಸಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು, ಇದರಿಂದಾಗಿ ಅವರ ಭಯ ಮತ್ತು ಶ್ರೇಷ್ಠತೆಯ ಕಲ್ಪನೆಯು ಜನರ ಹೃದಯದಿಂದ ಕಣ್ಮರೆಯಾಗುತ್ತದೆ, ಮತ್ತು ಈ ಯುಕ್ತಿಪೂರ್ಣ ನಿರ್ಧಾರವು ತುಂಬಾ ಅನುಗ್ರಹದಾಯಕವಾಗಿತ್ತು ಏಕೆಂದರೆ ಅದರ ಧ್ವಂಸವು ಅವರ ಸುಳ್ಳು ಭಯ ಮತ್ತು ವಿಸ್ಮಯವನ್ನು ಜನರ ಹೃದಯದಿಂದ ತೆಗೆದುಹಾಕಿತು ಮತ್ತು ಹಝ್ರತ್ ಪೈಗಂಬರ್(ಸ)ರು ಪ್ರಸ್ತುತಪಡಿಸಿದ ಏಕದೇವೋಪಾಸನೆಯ ಪರಿಕಲ್ಪನೆಯು ಸರಿಯಾಗಿದೆ ಎಂದು ನಂಬಲು ಪ್ರಾರಂಭಿಸಿದರು.

ಈ ವಿಗ್ರಹಗಳನ್ನು ಹೇಗೆ ಕೆಡವಲಾಯಿತು, ಈ ಸ್ಥಳಗಳನ್ನು ಹೇಗೆ ಕೆಡವಲಾಯಿತು ಮತ್ತು ಅದಕ್ಕೆ ಪ್ರತಿಕ್ರಿಯೆ ಏನಿತ್ತು? ಆರಂಭದಲ್ಲಿ ಯಾವುದೇ ವಿರೋಧವಿರಲಿಲ್ಲ ಅಥವಾ ಇತ್ತು ಎಂಬುದರ ಕುರಿತು ಇನ್ನೂ ಕೆಲವು ಘಟನೆಗಳನ್ನು ನಾನು ಮುಂದಿನ ಬಾರಿ ವಿವರಿಸುತ್ತೇನೆ ಇನ್‌ಶಾ ಅಲ್ಲಾಹ್.

ನಮಾಝಿನ ನಂತರ, ನಾನು ಎರಡು ನಮಾಝೆ ಜನಾಝ ಗಾಯಿಬ್‌ಗಳನ್ನು ನಿರ್ವಹಿಸುವೆನು, ಅವುಗಳಲ್ಲಿ ಒಂದು ಹೈದರಾಬಾದ್‌ನ ಜಾಂಶೋರೊದ ಚೌಧರಿ ಗುಲಾಮ್ ಖಾದಿರ್ ಸಾಹಿಬ್ ಅವರ ಪುತ್ರ

ಸನ್ಮಾನ್ಯ ಚೌಧರಿ ಅಬ್ದುಲ್ ಗಫೂರ್ ಸಾಹಿಬ್ ಅವರದ್ದಾಗಿದೆ. ಅವರು ಇತ್ತೀಚೆಗೆ ತಮ್ಮ ತೊಂಬತ್ತೆರಡನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಭೂಮಾಲೀಕ ಕುಟುಂಬಕ್ಕೆ ಸೇರಿದವರು. ಅಹ್ಮದೀಯರು 1900 ರ ದಶಕದ ಆರಂಭದಲ್ಲಿ ಬಾಧಕೋಟ್‌ನಿಂದ ಕೋಟ್ ಅಹ್ಮದೀಯ್ಯಾಗೆ ಸ್ಥಳಾಂತರಗೊಂಡರು. ಅವರ ತಂದೆ, ಜಮಾಅತ್ ಮತ್ತು ಖಿಲಾಫತ್ ಮೇಲಿನ ಪ್ರೀತಿಯಿಂದ, ಅವರನ್ನು 1942 ರಲ್ಲಿ ಉನ್ನತ ಧಾರ್ಮಿಕ ಮತ್ತು ಜಾತ್ಯತೀತ ಶಿಕ್ಷಣಕ್ಕಾಗಿ ಖಾದಿಯಾನ್‌ಗೆ ಕಳುಹಿಸಿದರು, ಅಲ್ಲಿ ಚೌಧರಿ ಸಾಹಿಬ್ ಪಾಕಿಸ್ತಾನಕ್ಕೆ ವಲಸೆ ಬರುವವರೆಗೆ ಅಧ್ಯಯನ ಮಾಡಿದರು ಮತ್ತು ಅಲ್ಲಿ ಅವರು ಹಿರಿಯರು ಮತ್ತು ಸಹಚರರ ಉತ್ತಮ ಸಹವಾಸದಿಂದ ಪ್ರಯೋಜನ ಪಡೆದರು. ಇಲ್ಲಿಗೆ ಬಂದ ನಂತರ, ಚೌಧರಿ ಗಫೂರ್ ಸಾಹಿಬ್ ತಮ್ಮ ಉಳಿದ ಶಿಕ್ಷಣವನ್ನು ಚಿನಿಯೋಟ್ ಮತ್ತು ರಬ್ವಾದಲ್ಲಿ ಪಡೆದರು. ನಂತರ, ಅವರು ಕರಾಚಿಯಿಂದ ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದರು ಮತ್ತು 1993 ರಲ್ಲಿ ನಿವೃತ್ತರಾದರು. ನಂತರ, ಅವರು ತಮ್ಮ ಜೀವನವನ್ನು (ವಖ್ಫ್ ಮಾಡಿದರು) ಮುಡಿಪಾಗಿಟ್ಟರು. ಉಗಾಂಡಾದಲ್ಲಿ ಎರಡು ವರ್ಷಗಳ ಕಾಲ ಒಂದು ಯೋಜನೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಅವರಿಗೆ ಲಭಿಸಿತು. ಅವರು ಅಹ್ಮದೀಯತ್‌ನ ಅತ್ಯಂತ ಧೈರ್ಯಶಾಲಿ ಪುತ್ರರಾಗಿದ್ದರು. ಅವರು ಜನರಿಗೆ ಸೇವೆ ಸಲ್ಲಿಸುವ ವ್ಯಕ್ತಿ, ಬಹಳ ಉದಾರಿಯಾಗಿದ್ದರು. ಅವರು ತಾರತಮ್ಯವಿಲ್ಲದೆ ಎಲ್ಲರ ಆರ್ಥಿಕ ಅಗತ್ಯಗಳನ್ನು ಪೂರೈಸಲು ಶ್ರಮಿಸುತ್ತಿದ್ದರು. ಅವರು ಆರ್ಥಿಕ ತ್ಯಾಗದಲ್ಲಿ ಪ್ರವರ್ತಕರಾಗಿದ್ದರು. ಅವರು ಪ್ರಾದೇಶಿಕ ಖಾಯಿದ್ ಆಗಿದ್ದರು. ಅನ್ಸಾರುಲ್ಲಾದಲ್ಲಿಯೂ ಅವರು ಅತ್ಯುತ್ತಮ ಸೇವೆಗಳನ್ನು ಸಲ್ಲಿಸಿದರು. ಅವರು ದೀರ್ಘಕಾಲದವರೆಗೆ ಹೈದರಾಬಾದ್‌ನ ಸಾರ್ವಜನಿಕ ವ್ಯವಹಾರಗಳ ಕಾರ್ಯದರ್ಶಿಯೂ (ಸೆಕ್ರೇಟೆಇ ಉಮೂರೆ ಆಮ್ಮ) ಆಗಿದ್ದರು. ಹಝ್ರ‌ತ್ ಖಲೀಫತುಲ್ ಮಸಿಹ್ ರಾಬಿ(ರಹ್) ಅವರನ್ನು ನವಾಬ್‌ಶಾ ಮತ್ತು ನೌಶಾಹ್ರೋ ಫಿರೋಜ್ ಜಿಲ್ಲೆಗಳ ಅಮೀರ್ ಆಗಿ ನೇಮಿಸಿದ್ದರು, ಈ ಜವಾಬ್ದಾರಿಯನ್ನು ಅವರು ಬಹಳ ಶ್ರಮದಿಂದ ಪೂರೈಸಿದರು. ಮೃತರು ಮೂಸಿಯಾಗಿದ್ದರು. ಬದುಕುಳಿದವರಲ್ಲಿ ಮೂವರು ಗಂಡು ಮಕ್ಕಳು ಮತ್ತು ಐದು ಹೆಣ್ಣುಮಕ್ಕಳು ಸೇರಿದ್ದಾರೆ.

ಅವರ ಹೆಣ್ಣುಮಕ್ಕಳಲ್ಲಿ ಒಬ್ಬರಾದ ಹುಮೈರಾ ಸಾಹಿಬಾ ಹೇಳುತ್ತಾರೆ, ಅವರು ಜನರಿಗೆ ಸೇವೆ ಸಲ್ಲಿಸುವುದನ್ನು ತಮ್ಮ ಬ್ಯಾಂಕ್ ಬ್ಯಾಲೆನ್ಸ್ ಎಂದು ಕರೆಯುತ್ತಿದ್ದರು ಮತ್ತು ಅದು ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಸಾಧಿಸುವ ಸಾಧನವೆಂದು ನಂಬಿದ್ದರು. ಅವರ ಮೂಲಕ ಅಗತ್ಯಗಳನ್ನು ಪೂರೈಸಿದ ಲೆಕ್ಕವಿಲ್ಲದಷ್ಟು ಅಹ್ಮದೀಯರು ಮತ್ತು ಅಹ್ಮದೀಯರಲ್ಲದವರು ಇದ್ದಾರೆ. ಅವರು ಪ್ರಯಾಣಿಕರು, ರೋಗಿಗಳು ಮತ್ತು ನಿರ್ಗತಿಕರ ಆರ್ಥಿಕ ಅಗತ್ಯಗಳನ್ನು ತಾರತಮ್ಯವಿಲ್ಲದೆ ನೋಡಿಕೊಂಡರು ಮತ್ತು ದೊಡ್ಡ ಮೊತ್ತದ ಹಣವನ್ನು ನೀಡುತ್ತಿದ್ದರು. ಜಮಾಅತ್ತಿಗಾಗಿ ಆರ್ಥಿಕ ತ್ಯಾಗದ ಮನೋಭಾವವೂ ಪ್ರಬಲವಾಗಿತ್ತು. ಹಝ್ರ‌ತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರು ಶತಮಾನೋತ್ಸವವನ್ನು ಆಚರಿಸಲು ಆರ್ಥಿಕ ಆಂದೋಲನವನ್ನು ಮಾಡಿದಾಗ, ಅವರು ತಕ್ಷಣ ಪ್ರತಿಕ್ರಿಯಿಸಿದರು ಮತ್ತು ಮರುದಿನ ರಬ್ವಾದಲ್ಲಿರುವ ತಮ್ಮ ಮನೆಯನ್ನು ಮಾರಿ ಈ ಉದ್ದೇಶಕ್ಕಾಗಿ ಸಂಪೂರ್ಣ ಹಣವನ್ನು ನೀಡಿದರು. ಖಿಲಾಫತ್ ಪೀಠವನ್ನು ವಹಿಸಿಕೊಂಡ ನಂತರ 1966 ರಲ್ಲಿ ಹಝ್ರ‌ತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಸಿಂಧ್‌ಗೆ ಭೇಟಿ ನೀಡಿದಾಗ, ಅವರು ಹೈದರಾಬಾದ್‌ನಿಂದ ಕೋಟ್ ಅಹ್ಮದಿಯನ್‌ನಲ್ಲಿರುವ ಅವರ ಮನೆಗೆ ಸಹ ಭೇಟಿ ನೀಡಿದರು. 1981 ರಲ್ಲಿ, ರಬ್ವಾದಲ್ಲಿ ಖಸ್ರೆ ಖಿಲಾಫತ್ (ಖಿಲಾಫತ್ ಅರಮನೆ)ಯನ್ನು ನಿರ್ಮಿಸುತ್ತಿದ್ದಾಗ, ಅವರನ್ನು ಸರ್ಕಾರವು ಯಾವುದೋ ಯೋಜನೆಗಾಗಿ ಆಫ್ರಿಕಾಕ್ಕೆ ಕಳುಹಿಸುತ್ತಿತ್ತು ಮತ್ತು ಅದು ಅವರಿಗೆ ಉತ್ತಮ ಅವಕಾಶವಾಗಿತ್ತು. ಅವರು ಸಲಹೆಗಾಗಿ ಹಝ್ರ‌ತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರ ಸನ್ನಿಧಿಗೆ ಬಂದಾಗ, ಅವರು ಹೇಳಿದರು, "ಅಲ್ಲಿಗೆ ಹೋಗಬೇಡಿ. ಅದನ್ನು ಬಿಟ್ಟುಬಿಡಿ, ನನ್ನ ಖಸ್ರೆ ಖಿಲಾಫತ್ ಅನ್ನು ಇಲ್ಲಿ ನಿರ್ಮಿಸಲಾಗುತ್ತಿದೆ, ಅದರ ಛಾವಣಿಗಳು ಇತ್ಯಾದಿಗಳು ನಿರ್ಮಿಸಲಾಗುತ್ತಿದೆ ಅದನ್ನು ನೋಡೊಕೊಳ್ಳಿ." ಆದ್ದರಿಂದ ಮರುದಿನವೇ ಅವರು ಆ ಕೆಲಸವನ್ನು ವಹಿಸಿಕೊಂಡು ಅಲ್ಲಿಯೇ ಇದ್ದರು, ಆದರೆ ಸರ್ವಶಕ್ತನಾದ ಅಲ್ಲಾಹನು ಅವರನ್ನು ಮತ್ತೆ ಅನುಗ್ರಹಿಸಿದನು. ಅದರ ನಂತರ, ಅವರು ರಜೆ ಮುಗಿಸಿ ಹಿಂತಿರುಗಿದಾಗ, ಅವರು ಸರ್ಕಾರದಿಂದ ಮತ್ತೆ ಅದೇ ಒಪ್ಪಂದವನ್ನು ಪಡೆದರು ಮತ್ತು ಅದು ಖಿಲಾಫತ್‌ನ ಅನುಗ್ರಹದಿಂದ ಮಾತ್ರ ಎಂದು ಹೇಳಿದರು.

ಅವರು ಹಝ್ರ‌ತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಮತ್ತು ರಬಿ(ರಹ್) ಅವರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು. ಅವರು ಅವರನ್ನು ಸಹ ಭೇಟಿ ಮಾಡುತ್ತಿದ್ದರು. ಅವರು ಅವರ ಮನೆಯಲ್ಲಿಯೂ ತಂಗಿದ್ದರು. ಅದೇ ರೀತಿ, ನಾನು ಪಾಕಿಸ್ತಾನದಲ್ಲಿದ್ದಾಗ, ಅವರ ಮನೆಗೆ ಹೋಗಿ ಅವರ ಮನೆಯಲ್ಲಿ ಉಳಿಯಲು ನನಗೆ ಅವಕಾಶ ಲಭಿಸಿತು. ಅವರು ತುಂಬಾ ಆತಿಥ್ಯ ವಹಿಸುತ್ತಿದ್ದರು. ವಾಸ್ತವವಾಗಿ, ಒಮ್ಮೆ ನಾನು ರಾತ್ರಿಯಲ್ಲಿ ಪ್ರಯಾಣಿಸಬೇಕಾಗಿತ್ತು. ಸಿಂಧ್‌ನಲ್ಲಿ ಪರಿಸ್ಥಿತಿಗಳು ಸಹ ಚೆನ್ನಾಗಿರಲಿಲ್ಲ. ಅವರು ಹೇಳಿದರು, ನಾನು ರಾತ್ರಿಯಲ್ಲಿ ನಿಮ್ಮನ್ನು ಕರೆದೊಯ್ಯುತ್ತೇನೆ. ಮಳೆ ಬರುತ್ತಿತ್ತು. ಭಾರೀ ಮಳೆಯಾಗುತ್ತಿತ್ತು. ರಸ್ತೆಗಳು ನೀರಿನಲ್ಲಿ ಮುಳುಗಿದ್ದವು, ಆದರೆ ಅವರು ಹೇಗಾದರೂ ನನ್ನನ್ನು ಕರೆದೊಯ್ದರು. ರಾತ್ರಿ ನಾನು ತಲುಪಬೇಕಾದ ಗಮ್ಯಸ್ಥಾನವನ್ನು ನಾವು ತಲುಪಿದೆವು. ಅದರ ನಂತರ, ನಾನು ಅವರಿಗೆ ಹೇಳಿದೆ, ನೀವು ಇಲ್ಲಿ ರಾತ್ರಿ ಇದ್ದು ಬೆಳಿಗ್ಗೆ ಹೊರಡಿರಿ. ನೀವು ಒಬ್ಬಂಟಿಯಾಗಿ ಹೋಗಬೇಡಿ ಅದಕ್ಕೆ ಅವರು ಇಲ್ಲ ಎಂದು ಹೇಳಿ ಆ ಕ್ಷಣದಲ್ಲಿಯೇ ತಮ್ಮ ಕಾರಿನಲ್ಲಿ ಕುಳಿತು ರಾತ್ರಿ ಹೊರಟುಹೋದರು. ಅವರು ತುಂಬಾ ಧೈರ್ಯಶಾಲಿ ವ್ಯಕ್ತಿಯಾಗಿದ್ದರು. ದೈವ ಮಾರ್ಗದಲ್ಲಿ ಸೆರೆಯಾಳರಿಗೆ ಅವರ ಸೇವೆಗಳು ಸಹ ಅಮೂಲ್ಯವಾದವು. ಅವರು ಜೈಲುಗಳಿಗೆ ಹೋಗಿ ಆಡಳಿತವನ್ನು ಸಂಪರ್ಕಿಸಿ ಅವರಿಗೆ ಸೌಲಭ್ಯಗಳನ್ನು ವ್ಯವಸ್ಥೆ ಮಾಡುತ್ತಿದ್ದರು.

ಅವರು ಮಾನವೀಯತೆಗೆ ಸೇವೆ ಸಲ್ಲಿಸುವ ಉತ್ಸಾಹದಿಂದ ತುಂಬಿದ್ದರು. ಅವರು ತಮ್ಮ ಆತ್ಮೀಯ ಸಂಬಂಧಿಕರಿಗೆ, ಬಡವರು ಮತ್ತು ನಿರ್ಗತಿಕರನ್ನು ನೋಡಿಕೊಂಡರು. ಅವರ ಪುತ್ರಿ ಹೇಳುತ್ತಾರೆ: ಅವರು ಉತ್ತಮ ಸೇವೆ ಸಲ್ಲಿಸಿದ್ದಾರೆ. ಅವರು ಖಿಲಾಫತ್ ವ್ಯವಸ್ಥೆಯ ಬಗ್ಗೆ ಆಳವಾದ ಪ್ರೀತಿಯನ್ನು ಹೊಂದಿದ್ದರು. ಖಲೀಫರ ಪ್ರತಿಯೊಂದು ಧ್ವನಿಗೂ ಸ್ಪಂದಿಸುತ್ತಿದ್ದರು ಮತ್ತು ಖಿಲಾಫತ್‌ನ ದೈನಂದಿನ ಸಂಭಾಷಣೆಯ ಭಾಗವಾಗಿದ್ದರು. ಅವರು ಭೇಟಿಯಾದ ಅಹ್ಮದಿಯೇತರ ಜನರು ಸಹ ಅವರ ಒಳ್ಳೆಯ ಕಾರ್ಯಗಳನ್ನು ಆಗಾಗ್ಗೆ ಉಲ್ಲೇಖಿಸುತ್ತಿದ್ದರು. ಅವರು ಅವರ ಮೇಲೂ ಉತ್ತಮ ಪ್ರಭಾವ ಬೀರಿದ್ದರು. ಅವರ ಸ್ನೇಹಿತರ ವಲಯವು ತುಂಬಾ ವಿಶಾಲವಾಗಿತ್ತು ಮತ್ತು ಅವರನ್ನು ಎಲ್ಲೆಡೆ ಅಹ್ಮದಿ ಎಂದು ಗುರುತಿಸಲಾಯಿತು. ಅವರು ಸರ್ಕಾರಿ ಅಧಿಕಾರಿಗಳು ಮತ್ತು ಸಿಂಧ್‌ನ ಎಲ್ಲಾ ದೊಡ್ಡ ರಾಜಕೀಯ ಕುಟುಂಬಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಮತ್ತು ಅವರು ಆಗಾಗ್ಗೆ ಅವರಿಗೆ ಜಮಾಅತ್‌ನ ಪವಿತ್ರ ಖುರ್‌ಆನ್ ಅನ್ನು ಪ್ರಸ್ತುತಪಡಿಸಿದರು ಮತ್ತು ಜಮಾಅತ್ ಅನ್ನು ಬಹಿರಂಗವಾಗಿ ಪರಿಚಯಿಸುತ್ತಿದ್ದರು. ಮತ್ತು ಅವರಿಗೆ ಸಾಧ್ಯವಾದರೆ, ಅವರು ಅವರಿಗೆ ರಬ್ವಾಗೂ ಕರೆದುಕೊಂಡು ಬರುತ್ತಿದ್ದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಕರುಣೆಯನ್ನು ನೀಡಲಿ. ಅವರ ಮಕ್ಕಳು ಸಹ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ಸಾಧ್ಯವಾಗಲಿ.

ಎರಡನೆಯ ಉಲ್ಲೇಖವೆಂದರೆ ಮುಹಮ್ಮದ್ ಅಲಿ ಸಾಹಿಬ್ ಅವರದ್ದಾಗಿದೆ. ಅವರು ಚಕ್ 275 ಕರ್ತಾರ್‌ಪುರ ಫೈಸಲಾಬಾದ್‌ನ ನಿವಾಸಿಯಾಗಿದ್ದರು. ಅವರು ಇತ್ತೀಚೆಗೆ ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ, ಅವರು ಕಾರ್ಯನಿರ್ವಾಹಕರಾಗಿದ್ದರು. ಅವರಿಗೆ ಮೂವರು ಗಂಡು ಮಕ್ಕಳು ಮತ್ತು ಐದು ಹೆಣ್ಣು ಮಕ್ಕಳಿದ್ದಾರೆ. ಅವರ ಒಬ್ಬ ಪುತ್ರ ಜಾಂಬಿಯಾದ ಲುಸಾಕಾದಲ್ಲಿ ಮುಬಲ್ಲಿಗ್ ಆಗಿದ್ದು. ಅವರು ಪ್ರಸ್ತುತ ಜಲ್ಸಾ ಸಾಲಾನ ಯುಕೆಯಲ್ಲಿ ಸೇರಲು ಇಲ್ಲಿದ್ದಾರೆ. ಈ ಕಾರಣಕ್ಕಾಗಿ, ಅವರು ತಮ್ಮ ತಂದೆಯ ಜನಾಝುದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಇದೇ ತಾಹಿರ್ ಅಹ್ಮದ್ ಸೈಫಿ ಸಾಹಿಬ್ (ಮುಬಲ್ಲಿಗ್ ಸಿಲ್‌ಸಿಲಾ) ಹೇಳುತ್ತಾರೆ: ತನ್ನ ತಂದೆಯ ಕುಟುಂಬದಲ್ಲಿ ಎರಡನೇ ಖಿಲಾಫತ್‌ನ ಆರಂಭಿಕ ದಿನಗಳಲ್ಲಿ ತನ್ನ ಅಜ್ಜ ಮೂಸಾ ಸಾಹಿಬ್ ಅಹ್ಮದಿಯ್ಯತ್ ಅನ್ನು ಸ್ವೀಕರಿಸಿ ಜಮಾಅತ್‌ಗೆ ಸೇರಿದಾಗ ಅಹ್ಮದಿಯ್ಯತ್ ಪ್ರಾರಂಭವಾಯಿತು. ಮೃತರು ಒಳ್ಳೆಯ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು, ಅವರು ನಿಯಮಿತವಾಗಿ ನಮಾಝ್ ಮತ್ತು ಉಪವಾಸ ಅನುಷ್ಠಿಸುವವರಾಗಿದ್ದರು. ಮತ್ತು ನಿಯಮಿತವಾಗಿ ನಮಾಝ್  ತಹಜ್ಜುದ್ ನಿರ್ವಹಿಸುವವರು, ಹರ್ಷಚಿತ್ತದಿಂದ, ಶಾಂತವಾಗಿ, ಬೆರೆಯುವವರಾಗಿದ್ದರು, ಮಾನವೀಯತೆಗೆ ಸೇವೆ ಸಲ್ಲಿಸುವ ಮನೋಭಾವದಿಂದ ತುಂಬಿದ್ದರು ಮತ್ತು ಹರ್ಷಚಿತ್ತದಿಂದ ಕೂಡಿದ ಮುಖ ಹೊಂದಿದ್ದರು. ಅವರಿಗೆ ಖಿಲಾಫತ್ ಬಗ್ಗೆ ಅಪಾರ ಪ್ರೀತಿ ಇತ್ತು. ಪ್ರತಿಯೊಂದು ಕೆಲಸಕ್ಕೂ, ಅವರು ಮೊದಲು ಖಲೀಫರಿಗೆ ಪತ್ರ ಬರೆದು ಅವರ ಪ್ರಾರ್ಥನೆಗಳನ್ನು ಕೇಳುತ್ತಿದ್ದರು. ಅವರು ಜಮಾಅತ್ತಿನ ಮತ್ತು ಧಾರ್ಮಿಕ ವ್ಯವಹಾರಗಳಲ್ಲಿ ಮೌನವಾಗಿ ಭಾಗವಹಿಸುತ್ತಿದ್ದರು ಮತ್ತು ಸಾಧ್ಯವಾದಲ್ಲೆಲ್ಲಾ, ಅವರ ಸ್ಥಾನಮಾನಕ್ಕೆ ಅನುಗುಣವಾಗಿ ಆರ್ಥಿಕ ತ್ಯಾಗಗಳಲ್ಲಿಯೂ ಭಾಗವಹಿಸುತ್ತಿದ್ದರು. ಎಂಟಿಎ ಪ್ರಾರಂಭವಾದಾಗ, ಅವರ

ಮನೆಯಲ್ಲಿ ಟಿವಿ ಇರಲಿಲ್ಲ, ಆದ್ದರಿಂದ ಎಂಟಿಎ ಪ್ರಾರಂಭವಾದ ತಕ್ಷಣ, ಅವರು ಖಲೀಫರ ಧ್ವನಿಯನ್ನು ನೇರವಾಗಿ ಕೇಳಲು ಸಾಧ್ಯವಾಗುವಂತೆ ತಕ್ಷಣ ಮನೆಗೆ ಟಿವಿ ತಂದರು. ನನ್ನ ತಂದೆ ಸಕ್ರಿಯವಾಗಿ ಭಾಗವಹಿಸದ ಖಲೀಫರ ಯಾವುದೇ ಚಲನೆಯನ್ನು ನನಗೆ ನೆನಪಿಲ್ಲ ಎಂದು ಹೇಳಲಾಗುತ್ತದೆ. ಅವರು ಅಪರಿಚಿತರ ಬಗ್ಗೆಯೂ ತುಂಬಾ ಸಹಾನುಭೂತಿ ಹೊಂದಿದ್ದರು. ಅವರು ಕೆಲಸ ಮಾಡುತ್ತಿದ್ದ ಕಾರ್ಖಾನೆಯಲ್ಲಿ, ಅವರು ಅಹ್ಮದೀಯರಲ್ಲದ ಅನೇಕರಿಗೆ ಕೆಲಸಗಳನ್ನು ನೀಡಿದರು, ಆದರೆ ಪದ್ಧತಿಯಂತೆ, ಕೆಲವು ಅಹ್ಮದೀಯರಲ್ಲದವರು ಅಷ್ಟೊಂದು ದಯೆ ತೋರುವುದಿಲ್ಲ, ಆದ್ದರಿಂದ ಅವರು ಅವರಿಗೆ ದಯೆ ತೋರಿಸಿದರೂ, ಅವರು ಮಾಲೀಕರಿಗೆ ದೂರು ನೀಡಿ ಅವರನ್ನು ಕೆಲಸದಿಂದ ತೆಗೆದುಹಾಕಬೇಕೆಂದು ಒತ್ತಾಯಿಸಿದರು. ಆದಾಗ್ಯೂ, ಅವರನ್ನು ಕೆಲಸದಿಂದ ತೆಗೆದುಹಾಕಲಾಯಿತು, ಆದರೆ ಅವರು ಯಾವುದೇ ಶಬ್ದ ಮಾಡಲಿಲ್ಲ. ಅವರು ಸರ್ವಶಕ್ತನಾದ ಅಲ್ಲಾಹನಿಗೆ ದೂರು ನೀಡಿದರು ಮತ್ತು ಸ್ವಲ್ಪ ಸಮಯದ ನಂತರ, ಕಾರ್ಖಾನೆಯ ಮಾಲೀಕರು ಅವರನ್ನು ಮತ್ತೆ ಕರೆದು ಅದೇ ಸ್ಥಾನದಲ್ಲಿ ಮರುಸ್ಥಾಪಿಸಿದರು, ಆದರೆ ಈ ರೀತಿ ವರ್ತಿಸಿದವರು ಅವರನ್ನು ಕೆಟ್ಟದಾಗಿ ನಡೆಸಿಕೊಳ್ಳಲಿಲ್ಲ, ಆದರೆ ಅವರನ್ನು ಚೆನ್ನಾಗಿ ನಡೆಸಿಕೊಂಡರು ಮತ್ತು ಅವರು ಕೆಲಸ ಮುಂದುವರೆಸಿದರು. ಅವರ ಉತ್ತಮ ನಡವಳಿಕೆಯು ಧರ್ಮೋಪದೇಶಕ್ಕಿಂತ ಮುಖ್ಯವಾಗಿತ್ತು ಎಂದು ಹೇಳಲಾಗುತ್ತದೆ, ಇದರಿಂದಾಗಿ ಫೈಸಲಾಬಾದ್ ನಗರದ ಎಂಟು ಜನರು ಅಹ್ಮದೀಯತ್ ಅನ್ನು ಸ್ವೀಕರಿಸಿದರು. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಅವರ ಮೇಲೆ ಕರುಣಿಸಲಿ ಮತ್ತು ಅವರ ಮಕ್ಕಳಿಗೆ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸುವ ಸಾಮರ್ಥ್ಯವನ್ನು ನೀಡಲಿ.

**(ಅಲ್-ಫಝ್ಲ್ ಇಂಟರ್ನ್ಯಾಷನಲ್, ಆಗಸ್ಟ್ 29, 2025, ಪುಟಗಳು 2 ರಿಂದ 6)**

------------*****------------

## (ಬದರ್ ಸಂಚಿಕೆ-39ರ ಪುಟ ಸಂಖ್ಯೆ-12ರ ಖುತ್‌ಬ ಜುಮುಅದ ಉಳಿದ ಭಾಗ)

ಜೆಕ್ ಗಣರಾಜ್ಯದ ಹಿರಿಯ ಪ್ರಾಧ್ಯಾಪಕ ಪೆಟ್ರ್ ಪೆಲಿಕನ್ ಅವರು ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಜೆಕ್ ಗಣರಾಜ್ಯದಲ್ಲಿ ಇಸ್ಲಾಮಿನ ಅಧ್ಯಯನ ಮತ್ತು ನ್ಯಾಯಶಾಸ್ತ್ರದಲ್ಲಿ ಪರಿಣಿತರು. ಅವರು ಸರ್ಕಾರಿ ಮಟ್ಟದಲ್ಲಿ ವಿವಿಧ ಹುದ್ದೆಗಳನ್ನು ಹೊಂದಿದ್ದಾರೆ. ಅವರು ನಿಯತಕಾಲಿಕೆಗಳು ಮತ್ತು ಪತ್ರಿಕೆಗಳಲ್ಲಿ ವಿವಿಧ ಲೇಖನಗಳನ್ನು ಬರೆಯುತ್ತಾರೆ ಮತ್ತು ಮುಖ್ಯವಾಗಿ ಸುನ್ನಿ ಮುಸ್ಲಿಂ ಆಗಿದ್ದಾರೆ. ಅವರು ಹೇಳುತ್ತಾರೆ: ಇದು ನನ್ನ ಎರಡನೇ ಜಲ್ಸವಾಗಿದೆ. ಈ ಹಿಂದೆ, ನಾನು ಜರ್ಮನಿಯಲ್ಲಿ ನಡೆದ ಜಲ್ಸದಲ್ಲಿ ಭಾಗವಹಿಸಿದ್ದೆ ಮತ್ತು ಇಲ್ಲಿಯೂ ಸಹ ನಾನು ಮೊದಲು ಅದೇ ಉನ್ನತ ಗುಣಮಟ್ಟವನ್ನು ನೋಡಿದೆ, ಆದರೆ ಇಲ್ಲಿ ಒಂದು ಹೆಚ್ಚುವರಿ ವಿಷಯವಿತ್ತು, ಅದು ಪ್ರಸ್ತುತ ಕಾಲದ ಖಲೀಫರ ಉಪಸ್ಥಿತಿಯಾಗಿತ್ತು, ಅದು ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ನಾನು ಜಗತ್ತಿನಲ್ಲಿ ಅನೇಕ ಸಭೆಗಳು ಮತ್ತು ಪ್ರದರ್ಶನಗಳನ್ನು ನೋಡಿದ್ದೇನೆ, ಆದರೆ ನಾನು ಅಂತಹ ಮಟ್ಟದ ಏಕತೆ, ಪ್ರೀತಿ ಮತ್ತು ಶಾಂತಿಯುತ ವಾತಾವರಣವನ್ನು ನೋಡಿದ್ದು ಇದೇ ಮೊದಲು. ಇಲ್ಲಿ, ಪ್ರತಿಯೊಬ್ಬ ವ್ಯಕ್ತಿಯ ಮುಖದಲ್ಲಿ ನಗು ಮತ್ತು ಸೇವಾ ಮನೋಭಾವವು ಸ್ಪಷ್ಟವಾಗಿತ್ತು, ಇದು ಅಹ್ಮದಿಯಾ ಸಮುದಾಯದ ಉನ್ನತ ಮಟ್ಟದ ತರಬೇತಿಯ ಅಭಿವ್ಯಕ್ತಿಯಾಗಿದೆ. ಪ್ರಸ್ತುತ ಕಾಲದ ಖಲೀಫಾ ನೀಡಿದ ಮೊದಲ ಭಾಷಣವು ನನಗೆ ಅನಿರೀಕ್ಷಿತ ಮತ್ತು ಅದ್ಭುತ ಅನುಭವವಾಗಿತ್ತು ಎಂದು ಅವರು ಹೇಳುತ್ತಾರೆ. ಅವರು ಬಹಳ ವಾಸ್ತವಿಕವಾಗಿ ಮಾತನಾಡಿದರು ಮತ್ತು ಅತಿಥಿಗಳನ್ನು ಹೇಗೆ ನೋಡಿಕೊಳ್ಳಬೇಕೆಂದು ಹೇಳಿದರು. ಅವರ ಹೃದಯಗಳು ಗಾಜಿನಂತೆ, ಅವರನ್ನು ನೋಡಿಕೊಳ್ಳಬೇಕು ಮತ್ತು ನಂತರ ಜನರು ಸಹ ಇದಕ್ಕೆ ಗಮನ ನೀಡಿದರು ಮತ್ತು ನಿಜವಾಗಿಯೂ ಅವರನ್ನು ಹಾಗೆಯೇ ನೋಡಿಕೊಂಡರು. ನಂತರ ಅವರು ಭದ್ರತಾ ವ್ಯವಸ್ಥೆಗಳು ಸಹ ಉತ್ತಮವಾಗಿವೆ ಮತ್ತು ಎಲ್ಲೆಡೆ ಕೆಲಸವು ಬಹಳ ಸಂಘಟಿತ ರೀತಿಯಲ್ಲಿ ಮಾಡಲ್ಪಟ್ಟಿದೆ ಮತ್ತು ಈ ಎಲ್ಲಾ ಕೆಲಸಗಳು ಯಾವುದೇ ಅಡೆತಡೆಯಿಲ್ಲದೆ ಸರಾಗವಾಗಿ ನಡೆಯುತ್ತಿರುವುದು ಆಶ್ಚರ್ಯಕರವಾಗಿತ್ತು ಎಂದು ಹೇಳುತ್ತಾರೆ. ಇತರರು ಸಹ ಇಲ್ಲಿಗೆ ಬರಬೇಕು ಎಂದು ನಾನು ಭಾವಿಸುತ್ತೇನೆ ಇದರಿಂದ ಅವರು ಬಂದು ಈ ಸಹೋದರತ್ವದ ವಾತಾವರಣವನ್ನು ತಮ್ಮ ಕಣ್ಣುಗಳಿಂದ ನೋಡಬಹುದು ಮತ್ತು ಇಲ್ಲಿನ ವಾತಾವರಣದಲ್ಲಿ ಪ್ರೀತಿ, ಸಹೋದರತ್ವ ಮತ್ತು ಶಾಂತಿ ಹೇಗೆ ಸೃಷ್ಟಿಯಾಗಿದೆ ಎಂಬುದನ್ನು ಅನುಭವಿಸಬಹುದು ಎಂದು ಅವರು ಹೇಳುತ್ತಾರೆ. ಇದು ಎಲ್ಲರಿಗೂ ಒಮ್ಮೆಯಾದರೂ ಸಿಗಬೇಕಾದ ಅನುಭವ. ಈ ಅನುಭವವು ಅಹ್ಮದಿಯಾ ಸಮುದಾಯದ ಭವಿಷ್ಯ ಉಜ್ವಲವಾಗಿದೆ ಎಂದು ನನಗೆ ಮನವರಿಕೆ ಮಾಡಿಕೊಡುತ್ತದೆ ಎಂದು ಅವರು ಹೇಳುತ್ತಾರೆ. ಈ ಜಲ್ಸವು ಇಸ್ಲಾಂ ಧರ್ಮದ ಬಗ್ಗೆ ನನ್ನ ತಿಳುವಳಿಕೆಯನ್ನು ಆಳಗೊಳಿಸಿದೆ ಮತ್ತು ವಿಸ್ತರಿಸಿದೆ. ನಾನು ಸುನ್ನಿ ಮುಸ್ಲಿಂ ಆಗಿದ್ದರೂ, ಅಹ್ಮದಿ ಸಹೋದರರನ್ನು ಇಸ್ಲಾಂ ಧರ್ಮದ ಹೊರಗಿನವರು ಎಂದು ನಾನು ಎಂದಿಗೂ ಪರಿಗಣಿಸಿಲ್ಲ. ಇಲ್ಲಿ ನನಗೆ ವಿವಿಧ ಭಾಷೆಗಳಲ್ಲಿ ಅಹ್ಮದಿ ವಿದ್ವಾಂಸರು ಮತ್ತು ಸಹೋದರರೊಂದಿಗೆ ಮುಖಾಮುಖಿಯಾಗಿ ಮಾತನಾಡುವ ಅವಕಾಶ ಸಿಕ್ಕಿತು, ಅವರು ಜಮಾಅತ್ತಿನ ನಂಬಿಕೆಗಳು ಮತ್ತು ಆದರ್ಶಗಳ ಬಗ್ಗೆ ಬಹಳ ಪ್ರಾಮಾಣಿಕವಾಗಿ ನನಗೆ ತಿಳಿಸಿದರು. ಇದು ನನಗೆ ಮುಸ್ಲಿಂ ಆಗಿ ಮಾತ್ರವಲ್ಲದೆ ಜೆಕ್ ಗಣರಾಜ್ಯದಲ್ಲಿ ಪ್ರಾಧ್ಯಾಪಕನಾಗಿಯೂ ಬಹಳ ಮುಖ್ಯವಾಗಿದೆ. ಕೆಲವು ವೃದ್ಧರು ಮತ್ತು ಕೆಲವು ಯುವಕರು ಸೇರಿದಂತೆ ಸ್ವಯಂಸೇವಕರೊಂದಿಗೆ ಮಾತನಾಡಲು ನನಗೆ ಅವಕಾಶ ಸಿಕ್ಕಿತು ಎಂದು ಅವರು ಹೇಳುತ್ತಾರೆ, ಮತ್ತು ನಾನು ಅವರೆಲ್ಲರನ್ನೂ ಅವರು ಈ ಸೇವೆಯನ್ನು ಏಕೆ ಮಾಡುತ್ತಿದ್ದಾರೆ ಎಂದು ಕೇಳಿದೆ. ಆದ್ದರಿಂದ ಎಲ್ಲರ ಉತ್ತರವು ಹೆಚ್ಚು ಕಡಿಮೆ ಒಂದೇ ಆಗಿತ್ತು, ನಾವು ಈ ಸೇವೆಯನ್ನು ಸರ್ವಶಕ್ತನಾದ ಅಲ್ಲಾಹನ ಸಂತೋಷಕ್ಕಾಗಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅತಿಥಿಗಳಿಗಾಗಿ ಮತ್ತು ನಮ್ಮ ಸ್ವಂತ ಆಧ್ಯಾತ್ಮಿಕ ಬೆಳವಣಿಗೆ ಮತ್ತು ಸುಧಾರಣೆಗಾಗಿ ಮಾತ್ರ ಮಾಡುತ್ತೇವೆ. ಸೇವಕರಲ್ಲಿ ಒಬ್ಬರು ಕಳೆದ ಹದಿನೈದು ವರ್ಷಗಳಿಂದ ಈ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವರು ಬಾಲ್ಯದಿಂದಲೂ, ಪ್ರತಿ ವರ್ಷ ಜಲ್ಸದ ದಿನಗಳನ್ನು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಸಲ್ಲಿಸಲು ಮೀಸಲಿಡುತ್ತಿದ್ದಾರೆ ಎಂದು ಹೇಳಿದರು. ಅವರು ಯಾವುದೇ ಲೌಕಿಕ ಪರಿಹಾರ ಅಥವಾ ಪ್ರತಿಫಲವಿಲ್ಲದೆ ಈ ಎಲ್ಲಾ ಸೇವೆಗಳನ್ನು ನಿರ್ವಹಿಸುತ್ತಾರೆ. ನನಗೆ, ಇದು ಖಿಲಾಫತ್ ವ್ಯವಸ್ಥೆಯು ಅವರ ಹೃದಯಗಳಲ್ಲಿ ತುಂಬಿರುವ ಅತ್ಯುನ್ನತ ಆಧ್ಯಾತ್ಮಿಕ ತರಬೇತಿಯಾಗಿದೆ ಮತ್ತು ಪ್ರತಿಯೊಬ್ಬ ಕಾರ್ಯಕರ್ತನು ತನ್ನ ಸೇವೆಯನ್ನು ಪ್ರಾಮಾಣಿಕತೆ, ತ್ಯಾಗ ಮತ್ತು ಪ್ರೀತಿಯಿಂದ ನಿರ್ವಹಿಸುತ್ತಿರುವುದಕ್ಕೆ ಇದೇ ಕಾರಣ. ಪ್ರತಿ ಋತುವಿನಲ್ಲಿ ಮತ್ತು ಪ್ರತಿಯೊಂದು ಸನ್ನಿವೇಶದಲ್ಲಿ ನಿಸ್ವಾರ್ಥವಾಗಿ ತಮ್ಮ ಶಕ್ತಿಯನ್ನು ನೀಡಲು ಸಿದ್ಧರಿರುವ ಈ ಪ್ರಾಮಾಣಿಕ ಸ್ವಯಂಸೇವಕರ ಬಗ್ಗೆ ನನ್ನ ಹೃದಯದಲ್ಲಿ ಅಪಾರ ಗೌರವ ಮತ್ತು ಭಕ್ತಿ ಇದೆ ಮತ್ತು ಒಬ್ಬ ಪ್ರಾಧ್ಯಾಪಕನಾಗಿ, ಅಹ್ಮದಿಯಾ ಸಮುದಾಯವು ಶಿಕ್ಷಣ ಮತ್ತು ಬೋಧನೆಗೆ ಎಷ್ಟು ಪ್ರಾಮುಖ್ಯತೆಯನ್ನು ನೀಡುತ್ತದೆ ಎಂಬುದನ್ನು ನೋಡುವುದು ನನಗೆ ಆಹ್ಲಾದಕರ ಮತ್ತು ಅದ್ಭುತವಾಗಿದೆ ಎಂದು ಹೇಳುತ್ತೇನೆ. ನಾನು ಪುಸ್ತಕ ಮಳಿಗೆಗಳಲ್ಲಿ ಹಲವು ಗಂಟೆಗಳ ಕಾಲ ಕಳೆದೆ. ನಾನು ವಿವಿಧ ಪುಸ್ತಕಗಳನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಿದೆ. ಅವುಗಳ ಗುಣಮಟ್ಟ, ವಿಷಯ ಮತ್ತು ಪಾಂಡಿತ್ಯಪೂರ್ಣ ಶೈಲಿಯು ತುಂಬಾ ಉತ್ತಮ ಮತ್ತು ಶ್ಲಾಘನೀಯ ಎಂದು ನಾನು ಕಂಡುಕೊಂಡೆ. ಇದು ಅದ್ಭುತ ಮತ್ತು ಸ್ಫೂರ್ತಿದಾಯಕ ಪಾಂಡಿತ್ಯಪೂರ್ಣ ಸೇವೆಯಾಗಿದೆ ಮತ್ತು ಅವರು ಒಂದೇ ರೀತಿಯ ಭಾವನೆಗಳು ಮತ್ತು ಆಲೋಚನೆಗಳನ್ನು ಹೊಂದಿದ್ದಾರೆ.

ಫ್ರೆಂಚ್ ಗಯಾನಾದ ನವ ಅಹ್ಮದಿ ಅಮಿನಾ ಮಾಲಾ ಸಿಂಗ್ ಸಾಹಿಬ ಅವರು ಹೇಲುತ್ತಾರೆ: ಅವರಿಗೆ ಜಲ್ಸದ ಸಮಯದಲ್ಲಿ ಅತ್ಯಂತ ಸ್ಪರ್ಶದ ವಿಷಯವೆಂದರೆ ಜನರ ನೈತಿಕತೆ ಮತ್ತು ಅವರ ಆತಿಥ್ಯವಾಗಿತ್ತು. ನೀವು ದಣಿದಿದ್ದರೆ ಮತ್ತು ಕುಳಿತುಕೊಳ್ಳಲು ಸ್ಥಳ ಬೇಕಾದರೆ, ಈಗಾಗಲೇ ಕುಳಿತಿದ್ದವರು ತಕ್ಷಣ ಎದ್ದು ನಿಮಗೆ ತಮ್ಮ ಸ್ಥಾನವನ್ನು ನೀಡುತ್ತಿದ್ದರು. ಶಾಂತಿ ಮತ್ತು ಸ್ವಾತಂತ್ರ್ಯದ ವಿಚಿತ್ರ ಭಾವನೆ ಇತ್ತು. ವರ್ಣನೆಗೆ ನಿಲುಕದ ಆಧ್ಯಾತ್ಮಿಕ ವಾತಾವರಣ ಮತ್ತು ಅತ್ಯಂತ ಪ್ರಭಾವಶಾಲಿ ಕ್ಷಣವೆಂದರೆ ನಾನು ಪ್ರಸ್ತುತ ಕಾಲದ ಖಲೀಫರನ್ನು ನೋಡಿದಾಗ ಮತ್ತು ಭೇಟಿಯಾದಾಗ. ನನ್ನ ಕಣ್ಣುಗಳಿಂದ ಅನೈಚ್ಛಿಕವಾಗಿ ಕಣ್ಣೀರು ಹರಿಯಿತು. ಖಿಲಾಫತ್‌ನೊಂದಿಗಿನ ಸಂಪರ್ಕ ಮತ್ತು ಆರಂಭದಿಂದಲೂ ನಿಷ್ಠೆಯ ಅಭಿವ್ಯಕ್ತಿ, ಇವೆಲ್ಲವೂ ಸರ್ವಶಕ್ತ ದೇವರಿಂದ ಸೃಷ್ಟಿಸಲ್ಪಟ್ಟಿವೆ. ಯಾವುದೇ ಮನುಷ್ಯನನ್ನು ಸೃಷ್ಟಿಸಲಾಗಿಲ್ಲ.

ಬಲ್ಗೇರಿಯಾದ ನವ ಅಹ್ಮದಿ ಮಹಿಳೆ ಇವೆಲಿನಾ ಸಾಹಿಬಾ ಹೇಳುತ್ತಾರೆ, "ನಾನು ನನ್ನ ಮನೆಯಲ್ಲಿ ಅಹ್ಮದಿ ಮಾತ್ರ. ನಾನು ಅಹ್ಮದಿಯತ್ ಅನ್ನು ಬಹಳ ಆಳವಾಗಿ ಅಧ್ಯಯನ ಮಾಡಿದೆ ಮತ್ತು ಮೂರು ವರ್ಷಗಳ ಸಂಶೋಧನೆಯ ನಂತರ ಅದನ್ನು ಒಪ್ಪಿಕೊಂಡೆ. ಇದು ಯುಕೆಯಲ್ಲಿ ನನ್ನ ಮೊದಲ ಸಭೆಯಾಗಿತ್ತು. ಇದು ತುಂಬಾ ಆಧ್ಯಾತ್ಮಿಕ ಸಭೆಯಾಗಿತ್ತು. ಖಲೀಫತುಲ್ ಮಸೀಹ್ ಇದರಲ್ಲಿ ಭಾಗವಹಿಸುವುದರಿಂದ ಮತ್ತು ಅದನ್ನು ಉದ್ದೇಶಿಸಿ ಮಾತನಾಡುವುದರಿಂದ ಇಲ್ಲಿ ಅತಿ ದೊಡ್ಡ ಸಭೆಯಾಗಿರುವ ಯುಕೆಯ ಸಭೆಯನ್ನು ನಾನೇ ಸೇರುವುದನ್ನು ನೋಡುವ ಅವಕಾಶಕ್ಕಾಗಿ

ನಾನು ಬಹಳ ಸಮಯದಿಂದ ಕಾಯುತ್ತಿದ್ದೆ. ಈ ಅನುಗ್ರಹದಾಯಕ ದಿನಗಳಲ್ಲಿ, ನಾನು ಅಪ್ರತಿಮ ಆಧ್ಯಾತ್ಮಿಕ ವಾತಾವರಣವನ್ನು ಅನುಭವಿಸಿದೆ ಮತ್ತು ಅದರ ಭಾಗವಾಗಲು ಅದೃಷ್ಟಶಾಲಿಯಾಗಿದ್ದೇನೆ ಎಂದು ಅವರು ಹೇಳುತ್ತಾರೆ. ದೇವರ ಭಕ್ತರಲ್ಲಿ ಇರುವುದರಿಂದ, ಸರ್ವಶಕ್ತ ದೇವರೊಂದಿಗಿನ ನನ್ನ ಸ್ವಂತ ಸಂಪರ್ಕವು ಬಲವಾಯಿತು. ಸಹೋದರತ್ವದ ಮನೋಭಾವ ಮತ್ತು ಪ್ರತಿಯೊಂದು ಅಂಶದಲ್ಲೂ ಗೋಚರಿಸುವ ಉನ್ನತ ನೈತಿಕ ಮತ್ತು ಆಧ್ಯಾತ್ಮಿಕ ಮಾನದಂಡಗಳು ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿವೆ. ಈ ಭವ್ಯ ಸಭೆಯನ್ನು ಆಯೋಜಿಸಲು ದಣಿವರಿಯಿಲ್ಲದೆ ಶ್ರಮಿಸಿದ ಎಲ್ಲಾ ಕಾರ್ಮಿಕರು, ಸ್ವಯಂಸೇವಕರು ಮತ್ತು ಸಂಘಟಕರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ವ್ಯಕ್ತಪಡಿಸಲು ನಾನು ಬಯಸುತ್ತೇನೆ. ನನ್ನ ಅನುಭವ ಅದ್ಭುತವಾಗಿತ್ತು ಮತ್ತು ಅತಿಥಿಗಳನ್ನು ಎಷ್ಟು ಸೂಕ್ಷ್ಮವಾಗಿ ನೋಡಿಕೊಳ್ಳಲಾಗಿದೆ ಎಂಬುದರ ಬಗ್ಗೆ ನಾನು ತುಂಬಾ ಪ್ರಭಾವಿತನಾಗಿದ್ದೆ. ಮುಂದೆ ಅವರು ಹೇಳುತ್ತಾರೆ: ಈ ಅನುಗ್ರಹದಾಯಕ ಸಭೆಯ ಕೊನೆಯಲ್ಲಿ, ನಾನು ಮೊದಲಿಗಿಂತ ಬಲವಾದ ನಂಬಿಕೆಯೊಂದಿಗೆ, ಹೆಚ್ಚಿನ ಜ್ಞಾನದೊಂದಿಗೆ, ಸರಿ ಮತ್ತು ನಾನು ಈಗ ನಿಜವಾದ ಇಸ್ಲಾಂಗೆ ಸೇರಿದವಳು ಎಂಬ ಖಚಿತತೆಯೊಂದಿಗೆ ಮನೆಗೆ ಮರಳುತ್ತೇನೆ. ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ)ರು ವಾಗ್ದಾನ ಮಾಡಿದಂತೆ ಖಲೀಫತುಲ್ ಮಸೀಹ್ ಅವರ ಆಗಮನದ ಬಗ್ಗೆ ಮಾತನಾಡಿದಾಗ ನನಗೆ ಅತ್ಯಂತ ಪ್ರಭಾವಶಾಲಿ ಕ್ಷಣವಿತ್ತು. ನಾನು ಈ ವಿಷಯವನ್ನು ಮೊದಲೇ ಚಿಂತಿಸಿದ್ದರೂ, ಖಲೀಫತುಲ್ ಮಸೀಹ್ ಅವರ ಮಾತುಗಳು ನನಗೆ ಹೊಸ ಒಳನೋಟವನ್ನು ನೀಡಿತು ಮತ್ತು ನನ್ನ ಮುಂದೆ ಬರದ ಹೊಸ ಕೋನಗಳನ್ನು ನನಗೆ ತೋರಿಸಿದವು. ಖಾತಮನ್ನಬಿಯೀನ್ ನಂತರ ಯಾರಾದರೂ ಬರುವ ಸಾಧ್ಯತೆಯ ಬಗ್ಗೆ ಕೆಲವು ವಿರೋಧಿಗಳು ಮಾಡುವ ಆರೋಪಗಳು ಮತ್ತು ಅನುಮಾನಗಳಿಗೆ ಈ ಭಾಷಣವು ಪೂರ್ಣ ಮತ್ತು ತಾರ್ಕಿಕ ಉತ್ತರವಾಗಿದೆ ಎಂದು ಅವರು ಹೇಳುತ್ತಾರೆ. ಈ ಭಾಷಣವು ನನ್ನ ತಿಳುವಳಿಕೆಯನ್ನು ವಿಸ್ತರಿಸಿದೆ, ನನ್ನ ಒಳನೋಟವನ್ನು ಆಳಗೊಳಿಸಿದೆ ಮತ್ತು ನನ್ನ ದೃಷ್ಟಿಕೋನವನ್ನು ಹೆಚ್ಚು ಸಮಗ್ರಗೊಳಿಸಿದೆ ಮತ್ತು ನಂತರ ನನ್ನ ಹೃದಯದ ಮೇಲೆ ಆಳವಾದ ಪ್ರಭಾವ ಬೀರಿದ ಮತ್ತೊಂದು ಭಾಷಣವೆಂದರೆ ಪವಿತ್ರ ಖುರ್‌ಆನ್ ದೇವರಿಂದ ಬಂದಿದೆ ಎಂಬ ವಾದಗಳು ಎಂದು ಹೇಳುತ್ತಾರೆ. ಪ್ರಸ್ತುತ ಯುಗದ ಆಕ್ಷೇಪಣೆಗಳನ್ನು ಎಷ್ಟು ತಾರ್ಕಿಕವಾಗಿ ಮತ್ತು ಸ್ಪಷ್ಟವಾಗಿ ನಿರಾಕರಿಸಲಾಗಿದೆ ಎಂದು ಕೇಳಿದಾಗ, ನನಗೆ ಮನಸ್ಸಿನ ಶಾಂತಿ ಸಿಕ್ಕಿತು ಮಾತ್ರವಲ್ಲದೆ ಸಭೆಯಲ್ಲಿ ಪವಿತ್ರ ಖುರ್‌ಆನ್‌ನ ಸತ್ಯದ ಮೇಲೆ ದಾಳಿಯಾದಾಗಲೆಲ್ಲಾ, ನಾನು ಕೂಡ ಈಗ ಈ ಆರೋಪಗಳನ್ನು ಸಮರ್ಥಿಸಿಕೊಳ್ಳಬಲ್ಲೆ ಎಂಬ ಹೊಸ ವಿಶ್ವಾಸವನ್ನೂ ಪಡೆದುಕೊಂಡೆ. ಆದ್ದರಿಂದ ಈ ಜನರಲ್ಲಿ ಹುಟ್ಟಿರುವ ಹೊಸ ಚೈತನ್ಯ ಇದು.

ಬ್ರೆಝಿಲ್‌ನ ಇಗೊರ್ ಲ್ಯೂಕಸ್ ಒಬ್ಬ ಪತ್ರಕರ್ತ ಮತ್ತು ಪ್ರಾಂತೀಯ ಸಂಸತ್ತಿನ ಕಾರ್ಯದರ್ಶಿ. ಅವರು ಹೇಳುತ್ತಾರೆ: ಜಲ್ಸದ ಕಾರ್ಯಕ್ರಮಗಳಲ್ಲಿ ಸಮಯಪಾಲನೆ ಶ್ಲಾಘನೀಯವಾಗಿದೆ. ಇದು ಬಹಳ ಯೋಗ್ಯವಾದ ವಿಷಯವಾಗಿತ್ತು. ಅಹ್ಮದಿಯಾ ಜಮಾಅತ್ತಿನ ಸದಸ್ಯರ ಆತಿಥ್ಯ ಮತ್ತು ಪ್ರಾಮಾಣಿಕತೆ ಬಹಳ ಪ್ರಭಾವಶಾಲಿಯಾಗಿದೆ. ಆಹಾರದಿಂದ ಸ್ನಾನಗೃಹಗಳನ್ನು ಬಳಸುವವರೆಗೆ, ಸಾರಿಗೆಯಿಂದ ಸಭೆಯ ಸ್ಥಳದ ಪ್ರವೇಶ ಮತ್ತು ನಿರ್ಗಮನದವರೆಗೆ, ಅತಿಥಿಗಳಿಗೆ ಯಾವಾಗಲೂ ಆದ್ಯತೆ ನೀಡಲಾಗುತ್ತಿತ್ತು. ಈ ಪರಿಸರವು ಜನರಿಗೆ ಒಗ್ಗಟ್ಟು ಮತ್ತು ತ್ಯಾಗದ ಪಾಠವನ್ನು ಕಲಿಸುತ್ತದೆ. ಆಹಾರ ವ್ಯರ್ಥ ಮಾಡುವುದನ್ನು ತಪ್ಪಿಸಲು ಗಂಭೀರ ಪ್ರಯತ್ನಗಳನ್ನು ಮಾಡಲಾಗುತ್ತದೆ, ಆದರೆ ಆಹಾರವನ್ನು ಎಲ್ಲರಿಗೂ ಬಹಳ ಉದಾರವಾಗಿ ವಿತರಿಸಲಾಗುತ್ತದೆ ಎಂಬ ಅಂಶದಿಂದ ನಾನು ಪ್ರಭಾವಿತನಾಗಿದ್ದೇನೆ ಎಂದು ಅವರು ಹೇಳುತ್ತಾರೆ.

ಇಂಡೋನೇಷ್ಯಾದ ಅತಿಥಿ ಗೋಮರ್ ಗುಲ್ಟಮ್. ಅವರು ಪಾದ್ರಿಯಾಗಿದ್ದಾರೆ. ಅವರು ಇಂಡೋನೇಷ್ಯಾದ ಚರ್ಚುಗಳ ಕಮ್ಯುನಿಯನ್ ಅಧ್ಯಕ್ಷರಾಗಿದ್ದಾರೆ. ಅವರು ಹೇಳುತ್ತಾರೆ: ನನಗೆ ಅಹ್ಮದಿಯತ್ ಬಗ್ಗೆ ತಿಳಿದಿತ್ತು, ಆದರೆ ಈ ಜಲ್ಸದ ಮೂಲಕ ಅಹ್ಮದಿಯತ್ ಎಂಬುದು ಖಾದಿಯಾನ್‌ನ ಒಂದು ಸಣ್ಣ ಹಳ್ಳಿಯಲ್ಲಿ ಪ್ರಾರಂಭವಾದ ಆಧ್ಯಾತ್ಮಿಕ ಚಳುವಳಿಯಾಗಿದೆ ಮತ್ತು ಈಗ ಅದು ಜಾಗತಿಕ ಆಧ್ಯಾತ್ಮಿಕ ಚಳುವಳಿಯಾಗಿದೆ ಎಂದು ನಾನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಅಲ್ಲಾಹನೊಂದಿಗೆ ಸ್ನೇಹವನ್ನು ಸೃಷ್ಟಿಸಲು ವಿವಿಧ ದೇಶಗಳ ಅಹ್ಮದೀಯರು ಅದೇ ಉತ್ಸಾಹದಿಂದ ಹೇಗೆ ಬಂದರು ಎಂಬುದನ್ನು ನಾನು ನೋಡಿದೆ. ಸರ್ವಶಕ್ತನಾದ ಅಲ್ಲಾಹನೊಂದಿಗೆ ವ್ಯಕ್ತಿಯ ಸಂಪರ್ಕವನ್ನು ಗಾಢವಾಗಿಸುವುದರ ಮೇಲೆ ಒತ್ತು ನೀಡುವುದು ಪ್ರಭಾವಶಾಲಿಯಾಗಿತ್ತು ಎಂದು ಅವರು ಹೇಳುತ್ತಾರೆ. ಇದು ಅನೇಕ ಜನರು ನಿರ್ಲಕ್ಷಿಸುವ ವಿಷಯವಾಗಿದೆ, ಆದರೆ ಇಲ್ಲಿ ಈ ವಿಷಯಗಳು ಮೂಲಭೂತವಾಗುತ್ತವೆ. ಮತ್ತು ಅವರ ಅನಿಸಿಕೆಗಳು ಹೀಗಿವೆ.

ಐಸ್ಲ್ಯಾಂಡ್‌ನಿಂದ ಬಂದ ಅತಿಥಿ ಯುನಿವರ್ಸಲ್ ಪೀಸ್ ಫೆಡರೇಶನ್‌ನ ಅಧ್ಯಕ್ಷ ನಂದಕಿಸೋರ್ ಸಾಹಿಬ್. ಅವರು ಹೇಳುತ್ತಾರೆ: ಮತ್ತಾಯ 7:16 ಹೇಳುತ್ತದೆ, "ಅವರ ಫಲಗಳಿಂದ ನೀವು ಅವರನ್ನು ಗುರುತಿಸುವಿರಿ." 2025 ರ ಜಲ್ಸ ಸಾಲಾನದ ಸಮಯದಲ್ಲಿ ಈ ಮಾತುಗಳು ನನಗೆ ಪ್ರಬಲ ಮತ್ತು ಜೀವಂತ ವಾಸ್ತವದಂತೆ ಬಂದವು. ಹಾಜರಿದ್ದವರ ಪ್ರಕಾಶಮಾನವಾದ, ಸಂತೋಷದ ಮುಖಗಳನ್ನು ನೋಡುವುದು ನನ್ನ ಹೃದಯವನ್ನು ಮುಟ್ಟಿತು. ನನಗೆ, ದೇವರು ತನ್ನ ಇಚ್ಛೆಯನ್ನು ಹುಡುಕುತ್ತಾ ಒಟ್ಟುಗೂಡಿದ ತನ್ನ ಸೇವಕರ ಐಕ್ಯತೆಯನ್ನು ನೋಡಿ ಸಂತೋಷಪಡುತ್ತಾನೆ ಎಂಬುದರ ಸ್ಪಷ್ಟ ಸಂಕೇತವಾಗಿತ್ತು. ಆಫ್ರಿಕಾದಲ್ಲಿ ಮಾನವೀಯ ಕೆಲಸ ಮಾಡುತ್ತಿದ್ದ ಮಾನವೀಯ ಪ್ರಥಮ ಕಾರ್ಯಕರ್ತೆಯೊಬ್ಬರು ಈ ಸೇವೆಯು ಇತರರಿಗೆ ಪ್ರಯೋಜನವನ್ನು ನೀಡುವುದಲ್ಲದೆ ಅವರನ್ನು ದೇವರಿಗೆ ಹತ್ತಿರವಾಗಿಸುತ್ತದೆ ಎಂದು ಹೇಳಿದರು. ನಂಬಿಕೆಯನ್ನು ಆಚರಣೆಗೆ ತರಲು ಇದು ಪ್ರಬಲ ಜ್ಞಾಪನೆಯಾಗಿದೆ. ಇಂತಹ ಅನೇಕ ಅಭಿವ್ಯಕ್ತಿಗಳಿವೆ.

ಕಝಾಕಿಸ್ತಾನ್‌ನ ಅಹ್ಮದಿಯೇತರ ಅತಿಥಿ ಮಹಿಳೆ ಸಾಲೇಹ್ (ಸೌಲಿ) ಸಾಹಿಬಾ ಅವರು ಹೇಳುತ್ತಾರೆ, ನಾನು ಕಝಾಕಿಸ್ತಾನ್‌ಗೆ ಸೇರಿದವಳು. ನಾನು ಜಲ್ಸಕ್ಕೆ ಮೊದಲ ಬಾರಿಗೆ ಹಾಜರಾಗಿದ್ದೇನೆ. ನನಗೆ ಅನೇಕ ಲೌಕಿಕ ಕಾರ್ಯಕ್ರಮಗಳು ಮತ್ತು ಸಮ್ಮೇಳನಗಳಿಗೆ ಹಾಜರಾಗಲು ಅವಕಾಶ ಲಭಿಸಿದೆ, ಆದರೆ ಇಲ್ಲಿ ಹಾಜರಿರುವವರ ಸಂಖ್ಯೆಯಿಂದ ನಾನು ತುಂಬಾ ಪ್ರಭಾವಿತಳಾಗಿದ್ದೆ. ನಂತರ ವಿವಿಧ ದೇಶಗಳಿಂದ ಕೇವಲ ಒಳ್ಳೆಯತನಕ್ಕಾಗಿ ಬಂದ ಅನೇಕ ಜನರು. ಅವರ ಏಕೈಕ ಉದ್ದೇಶವೆಂದರೆ ಒಳ್ಳೆಯತನದ ಮಾತುಗಳನ್ನು ಕೇಳುವುದು ಮತ್ತು ಜಗತ್ತಿನಲ್ಲಿ ಜನರು ಹೇಗೆ ಶಾಂತಿ ಮತ್ತು ಸಾಮರಸ್ಯದಿಂದ ಬದುಕಬಹುದು ಮತ್ತು ಪ್ರಪಂಚದಿಂದ ದ್ವೇಷದ ಭಾವನೆಗಳನ್ನು ಹೇಗೆ ತೆಗೆದುಹಾಕಬಹುದು ಮತ್ತು ಜಗತ್ತಿನಲ್ಲಿ ಪ್ರೀತಿ ಮತ್ತು ವಾತ್ಸಲ್ಯವನ್ನು ಹೇಗೆ ಹರಡಬಹುದು. ನಂತರ ಅವರು ಹೇಳುತ್ತಾರೆ ಖಲೀಫತುಲ್ ಮಸೀಹ್ ಅವರ ಮಹಿಳೆಯರ ಸ್ಥಾನಮಾನದ ಉನ್ನತಿಯ ಬಗ್ಗೆ ಅವರ ಮಾತುಗಳು ತುಂಬಾ ಅದ್ಭುತವಾಗಿದ್ದವು. ಈ ಜಲ್ಸದ ಘೋಷಣೆ "ಎಲ್ಲರೊಂದಿಗೆ ಪ್ರೀತಿ, ಯಾರೊಂಗೂ ದ್ವೇಷವಿಲ್ಲ" ಎಂದಾಗಿತ್ತು ಮತ್ತು ಜನರ ಐಕ್ಯತೆಯು ನಾವು ಒಂದಾಗಿರಬೇಕು ಎಂಬ ಅಂಶಕ್ಕೆ ಕಾರಣವಾಗುತ್ತಿತ್ತು. ನಾನು ಅಂತಹ ಮಾತುಗಳನ್ನು ಎಂದಿಗೂ ಕೇಳಿಲ್ಲ ಮತ್ತು ಇದೆಲ್ಲವೂ ಆತ್ಮದಲ್ಲಿ ಲೀನವಾಗಿತ್ತು. ಈ ಮಹಿಳೆ ಅಹ್ಮದಿಯೇತರಳಾಗಿದ್ದಳು. ಅವರು ಹೇಳುತ್ತಾರೆ, ನನ್ನ ಬಾಸ್ ಅಹ್ಮದಿಯಾಗಿದ್ದಾರೆ. ನಾನು ಮೊದಲು ಅವರನ್ನು ವಿರೋಧಿಸಿದ್ದೆ ಆದರೆ ಈಗ ಈ ಇಡೀ ಪರಿಸರವನ್ನು ನೋಡಿದ ನಂತರ ನಾನು ಅವರನ್ನು ವಿರೋಧಿಸುವುದನ್ನು ನಿಲ್ಲಿಸಿ ಬೆಂಬಲಿಸುತ್ತೇನೆ.

ಮೋಸ್ತಾಗ್ ಝುಹೀರ್ ನೀರ್ಝಾ ಸಾಹಿಬ್ ಆಸ್ಟ್ರಿಯಾದಿಂದ ಬಂದವರು. ಅವರು ಆಸ್ಟ್ರಿಯಾದಲ್ಲಿ ಇಸ್ಲಾಮಿನ ಅಧ್ಯಯನಗಳ ಪ್ರಾಧ್ಯಾಪಕರಾಗಿದ್ದಾರೆ ಮತ್ತು ಜಲ್ಸ ಸಾಲಾನದಲ್ಲಿ ನಾನು ಎಲ್ಲೆಡೆ ಸತ್ಯವಿಶ್ವಾಸಿಗಳನ್ನು ನೋಡಿದೆ ಎಂದು ಹೇಳುತ್ತಾರೆ. ಎಲ್ಲರೂ ತುಂಬಾ ಸ್ನೇಹಪರರಾಗಿದ್ದರು ಮತ್ತು ಇಸ್ಲಾಂ ಧರ್ಮಕ್ಕೆ ಸೇವೆ ಸಲ್ಲಿಸಲು ವಿಶೇಷ ಉತ್ಸಾಹವನ್ನು ಹೊಂದಿದ್ದರು ಮತ್ತು ಪ್ರಸ್ತುತ ಕಾಲದ ಖಲೀಫರ ಮಾತುಗಳಿಂದ ನಾನು ತುಂಬಾ ಪ್ರಭಾವಿತನಾಗಿದ್ದೆ. ಆ ಸಮಯದಲ್ಲಿ ಮುಖ್ಯವಾಹಿನಿಯ ಮುಸ್ಲಿಮರಲ್ಲಿ ವಿದ್ವಾಂಸರು ಗಡ್ಡ ಬೆಳೆಸುವುದು ಮತ್ತು ವಿಶೇಷ ಬಟ್ಟೆಗಳನ್ನು ಧರಿಸುವುದು ಮತ್ತು ಹೆಸರಿನಲ್ಲಿ ಮುಸ್ಲಿಮರಾಗಿದ್ದರು ಎಂದು ಅವರು ಹೇಳುತ್ತಾರೆ ಆದರೆ ಅಹ್ಮದಿಯಾ ಜಮಾಅತ್ ಇಸ್ಲಾಂ ಧರ್ಮಕ್ಕೆ ಪ್ರಾಮಾಣಿಕ ಹೃದಯದಿಂದ ಸೇವೆ ಸಲ್ಲಿಸುತ್ತಿರುವ ಏಕೈಕ ಜಮಾಅತ್ತಾಗಿದೆ ಮತ್ತು ಬಹುಶಃ ಇನ್ನೂರು ವರ್ಷಗಳಲ್ಲಿ ಅದು ಜಗತ್ತಿನಲ್ಲಿ ಮೇಲುಗೈ ಸಾಧಿಸುತ್ತದೆ ಎಂದು ಅವರು ಹೇಳುತ್ತಾರೆ. ಅವರು ಹೇಳುತ್ತಾರೆ: ನಾನು ಸುನ್ನಿ ಮುಸ್ಲಿಂ ಆಗಿದ್ದೇನೆ. ಆದರೆ ಅಹ್ಮದಿಯಾ ಜಮಾಅತ್‌ನ ಸ್ಥಾಪಕರು ನಿಜವಾಗಿಯೂ ಪವಿತ್ರ ವ್ಯಕ್ತಿ ಎಂದು ನಾನು ನಂಬುತ್ತೇನೆ ಮತ್ತು ಪ್ರಸ್ತುತ ಕಾಲದಲ್ಲಿ ಅವರು ಪ್ರಸ್ತುತ ಕಾಲದ ಮುಜದ್ದಿದ್ ಆಗಿದ್ದಾರೆ ಎಂದು ನಾನು ಭಾವಿಸುತ್ತೇನೆ. ಅವರು ಅದನ್ನು ಒಪ್ಪಿಕೊಂಡಿದ್ದಾರೆ. ಅವರು ಹೇಳುತ್ತಾರೆ, ಆದರೆ ನಾನು ಈಗ ಅದರ ಬಗ್ಗೆ ಯೋಚಿಸುತ್ತಿದ್ದೇನೆ. ನಾನು ಅದನ್ನು ಪರಿಗಣಿಸುತ್ತಿದ್ದೇನೆ. ವಾಗ್ದತ್ತ ಮಸೀಹ್ ಮತ್ತು ಮಹದಿಯವರನ್ನು ನಂಬಲು ನನಗೆ ಇನ್ನೂ ಸ್ವಲ್ಪ ಹಿಂಜರಿಕೆ ಇದೆ, ಆದಾಗ್ಯೂ, ನಾನು ಸಂಶೋಧನೆ ಮಾಡುತ್ತಿದ್ದೇನೆ. ಆದಾಗ್ಯೂ, ಇದು ಅವರ ಒಂದು ಆಲೋಚನೆ ಆಗಿದೆ. ಕನಿಷ್ಠಪಕ್ಷ ಅವರು ಪವಿತ್ರ ಸ್ವಭಾವದವರಾಗಿದ್ದಾರೆ. ಅವರು ನಾನು ಯೋಚಿಸುತ್ತಿದ್ದೇನೆ ಎಂದು ಹೇಳಿದ್ದಾರೆ ಮತ್ತು ಅದರ ಬಗ್ಗೆ ಯೋಚಿಸುವುದಿಲ್ಲ ಎಂದು ಹೇಳುವ ಧೈರ್ಯವನ್ನು ತೋರಿಸಿಲ್ಲ.

ಬಲ್ಗೇರಿಯಾದಿಂದ ನವ ಅಹ್ಮದಿ ಎಲಿಸ್ಸಾ ರೂಡಿ ಡೆಮಾಂಗೆ

ಎಂಬವರಾಗಿದ್ದಾರೆ. ಅವರು ಕ್ರೈಸ್ತ ಧರ್ಮದಿಂದ ಇಸ್ಲಾಮ್‌ಗೆ ಮತಾಂತರಗೊಂಡಿದ್ದಾರೆ. ಅವರು ಹೇಳುತ್ತಾರೆ, "ಈ ಜಲ್ಸಕ್ಕೆ ಸೇರುವ ಮೊದಲು, ನಾನು ಹೊಸಬಳು ಮತ್ತು ನನ್ನ ಸಂಸ್ಕೃತಿ ಮತ್ತು ಭಾಷೆ ವಿಭಿನ್ನವಾಗಿರುವುದರಿಂದ ನಾನು ಯಾವಾಗಲೂ ಈ ಪರಿಸರದ ಭಾಗವೆಂದು ಭಾವಿಸುವುದಿಲ್ಲ ಎಂದು ನಾನು ಚಿಂತಿತನಾಗಿದ್ದೆ, ಆದರೆ ನಾನು ಇಲ್ಲಿ ನೋಡಿದ ಏಕತೆ ಮತ್ತು ಪ್ರೀತಿಯನ್ನು ನಾನು ಜಗತ್ತಿನ ಬೇರೆಲ್ಲಿಯೂ ನೋಡಿಲ್ಲ. ನಾನು ಪ್ರಪಂಚದಾದ್ಯಂತದ ಜನರನ್ನು ಭೇಟಿಯಾದೆ, ಆದರೆ ಅವರೆಲ್ಲರೂ ಒಂದೇ ಕುಟುಂಬದ ಭಾಗವೆಂದು ಭಾವಿಸಿದರು. ಅವರು ಒಬ್ಬರನ್ನೊಬ್ಬರು ತಿಳಿದಿಲ್ಲದಿದ್ದರೂ, ಅವರು ಒಬ್ಬರನ್ನೊಬ್ಬರು ನಗುತ್ತಾ ಭೇಟಿಯಾಗುತ್ತಿದ್ದರು. ಕೆಲವೊಮ್ಮೆ ಅನುಮಾನಗಳು ಅಥವಾ ನಿರ್ಲಕ್ಷ್ಯವು ವ್ಯಕ್ತಿಯ ನಂಬಿಕೆ ಮತ್ತು ಧರ್ಮನಿಷ್ಠೆಯ ಮೇಲೆ ನೆಲೆಗೊಳ್ಳುತ್ತದೆ. ಜಲ್ಸ ಸಾಲಾನದಲ್ಲಿ ಭಾಗವಹಿಸುವುದು ಹೃದಯ ಮತ್ತು ಆತ್ಮದ ಶುದ್ಧೀಕರಣದಂತೆ ಮತ್ತು ಒಬ್ಬ ವ್ಯಕ್ತಿಯು ಹೊಸ ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸುತ್ತಾನೆ. ಈ ಅನುಭವವು ಆತ್ಮವನ್ನು ಉಲ್ಲಾಸಗೊಳಿಸುತ್ತದೆ ಮತ್ತು ಹೃದಯವನ್ನು ಶಾಂತಿ ಮತ್ತು ನೆಮ್ಮದಿಯಿಂದ ತುಂಬುತ್ತದೆ.

ಜಾರ್ಜಿಯಾದ ರೋಲ್ಯಾಂಡ್ ಶವಾಡ್ಜೆ ಹೇಳುವಂತೆ, ಜಲ್ಸದ ಶಾಂತಿಯುತ ವಾತಾವರಣವು ಆಧ್ಯಾತ್ಮಿಕತೆಯಲ್ಲಿ ಭಾಷಣಗಳು ಮತ್ತು ಖಲೀಫರ ಭಾಷಣಗಳನ್ನು ಮುಂದುವರಿಸುವಲ್ಲಿ ದೊಡ್ಡ ಪಾತ್ರವನ್ನು ವಹಿಸುತ್ತದೆ ಮತ್ತು ಆತಿಥ್ಯದ ಕುರಿತು ಇಸ್ಲಾಮಿನ ಬೋಧನೆಗಳನ್ನು ವಿವರಿಸಿದ ಖುತ್‌ಬ ಜುಮುಅ ನನಗೆ ನಿಜವಾಗಿಯೂ ಇಷ್ಟವಾಯಿತು ಮತ್ತು ಪ್ರಸ್ತುತ ಕಾಲದ ಖಲೀಫರು ಮಹಿಳೆಯರಿಗೆ ಮಾಡಿದ ಭಾಷಣವೂ ನನಗೆ ಇಷ್ಟವಾಯಿತು. ಅದು ನನ್ನ ಮೇಲೆ ಹೆಚ್ಚಿನ ಪ್ರಭಾವ ಬೀರಿತು ಮತ್ತು ಅವರು ಹೇಳುತ್ತಾರೆ: ನಾನು ಜಾರ್ಜಿಯನ್ ಮುಸ್ಲಿಂ ಆಗಿದ್ದೇನೆ ಮತ್ತು ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕನಾಗಿದ್ದೇನೆ. ಎರಡು ವರ್ಷಗಳ ಹಿಂದೆ ನಾನು ಜಾರ್ಜಿಯಾದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಪಡೆದುಕೊಂಡಿದ್ದೇನೆ ಮತ್ತು ನನ್ನ ಕ್ಷೇತ್ರವೂ ಶಿಕ್ಷಣವಾಗಿದೆ ಮತ್ತು ನಿಮ್ಮ ಜಮಾಅತ್ತಿನ ಮಹಿಳೆಯರು ಮತ್ತು ಪುರುಷರು ಶಿಕ್ಷಣ ಪಡೆಯಲು ಪ್ರೋತ್ಸಾಹಿಸುವ ರೀತಿ ನನಗೆ ವಿಶೇಷವಾಗಿ ಇಷ್ಟವಾಯಿತು. ಅವರು ಹೇಳುತ್ತಾರೆ, ಈ ವರ್ಷ ನಾನು ಇಸ್ಲಾಮ್ ಧರ್ಮದ ತತ್ವಜ್ಞಾನ ಗರಂಥವನ್ನು ಇಂಗ್ಲಿಷ್‌ನಿಂದ ಜಾರ್ಜಿಯನ್‌ಗೆ ಅನುವಾದಿಸಲು ಸಾಧ್ಯವಾಯಿತು. ಅದನ್ನು ಅನುವಾದಿಸುತ್ತಿರುವಾಗ ನನಗೆ ಬಹಳ ಆನಂದವುಂಟಾಯಿತು. ಮತ್ತು ಖಲೀಫತುಲ್ ಮಸೀಹ್ ಭಾನುವಾರ ತಮ್ಮ ಸಮಾರೋಪ ಭಾಷಣದಲ್ಲಿ ನಿಮ್ಮನ್ನು ದ್ವೇಷದಿಂದ ನೋಡುವ ಇತರ ಮುಸ್ಲಿಮರ ಸುಳ್ಳು ಆರೋಪಗಳನ್ನು ಇಸ್ಲಾಂ ಧರ್ಮದ ಸುಂದರ ಬೋಧನೆಗಳೊಂದಿಗೆ ನಿರಾಕರಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ನನಗೆ ಅದು ತುಂಬಾ ಇಷ್ಟವಾಯಿತು ಮತ್ತು ನಂತರ ಬೈಅತ್ ಸಮಾರಂಭದ ನೋಟವು ನನ್ನನ್ನು ತುಂಬಾ ಪ್ರಭಾವಿಸಿತು. ಇಂದು ಇಸ್ಲಾಂ ಧರ್ಮದ ಬಗ್ಗೆ ನಕಾರಾತ್ಮಕ ಚಿತ್ರಣವನ್ನು ಪ್ರಸ್ತುತಪಡಿಸಲಾಗಿದೆ ಎಂದು ಅವರು ಹೇಳುತ್ತಾರೆ. ಇಸ್ಲಾಂನ ಸುಂದರ ಬೋಧನೆಗಳನ್ನು ನೋಡಲು ಬಯಸುವವರು ಜಲ್ಸಕ್ಕೆ ಆಗಮಿಸಿ ಪ್ರೀತಿ, ಸಹೋದರತ್ವ ಮತ್ತು ಶಾಂತಿಯ ವಾತಾವರಣವನ್ನು ತಮ್ಮ ಕಣ್ಣುಗಳಿಂದ ಗಮನಿಸಲಿ.

ಅದೇ ರೀತಿ, ಜೆಸ್ಸಿಕಾ ಗಾರ್ಸಿಯಾ ಕೋಲ್ ಲಿಕಾರ್ಡೊ ಕಾಂಗ್ರೆಸ್ಸಿಗ ಸ್ಯಾಮ್ ಲಿಕಾರ್ಡೊ ಅವರ ಪತ್ನಿಯಾಗಿದ್ದಾರೆ. ಅವರು ಹೇಳುತ್ತಾರೆ: ನಾನು ದೇಶೀಯ ಹಿಂಸಾಚಾರದ ವಿರುದ್ಧ ಇಲಾಖೆಯಲ್ಲಿ ಕೆಲಸ ಮಾಡುತ್ತೇನೆ. ಮತ್ತು ಖಲೀಫರು ತಮ್ಮ ಭಾಷಣದಲ್ಲಿ ಮಹಿಳೆಯರ ವಿರುದ್ಧ ದೈಹಿಕ ಹಿಂಸೆಯನ್ನು ಮಾತ್ರವಲ್ಲದೆ ಮಹಿಳೆಯರ ವಿರುದ್ಧ ಭಾವನಾತ್ಮಕ ಹಿಂಸೆಯನ್ನು ಸಹ ಉಲ್ಲೇಖಿಸಿದ್ದಾರೆ ಎಂದು ತಿಳಿದು ನನಗೆ ಆಶ್ಚರ್ಯವಾಯಿತು. ಒಂದು ಪ್ರಶ್ನೆಗೆ ಉತ್ತರ ಅವರಿಗೆ ಅಪೂರ್ಣವಾಗಿತ್ತು. ಅವರು ಹೇಳುತ್ತಾರೆ: ನನಗೆ ಅದು ನನಗೆ ಲಭಿಸಲಿಲ್ಲ ಅದೇನೆಂದರೆ ಓರ್ವ ಮಹಿಳೆಗೆ ಏನಾದರೂ ಸಂಭವಿಸಿದರೆ ಅವಳು ಎಲ್ಲಿ ಸಹಾಯ ಪಡೆಯಬಹುದು? ನಂತರ ಅವರು ನನ್ನನ್ನು ಕೇಳಿದರು ಎಂದು ಅವಳು ಹೇಳುತ್ತಾಳೆ. ನಾನು ಅವರಿಗೆ ಅವಳು ಜಮಾಅತ್‌ನ ವ್ಯವಸ್ಥೆಯ ಬಳಿ ಬರುತ್ತಾರೆ ಎಂದು ಹೇಳಿದೆ. ಖಲೀಫರ ಬಳಿ ಕೂಡ ಬರುತ್ತಾಳೆ. ಅವಳು ಜಮಾಅತ್ ವ್ಯವಸ್ಥೆಗೆ ಬರುತ್ತಾಳೆ. ನಂತರ ಜಮಾಅತ್ ಸಹ ಅವರಿಗೆ ಸಹಾಯ ಮಾಡುತ್ತದೆ ಮತ್ತು ಇತರ ವಿಧಾನಗಳನ್ನು ಅಳವಡಿಸಿಕೊಳ್ಳಬಹುದು. ಆದಾಗ್ಯೂ, ಈ ಎಲ್ಲಾ ವಿಷಯಗಳನ್ನು ಕೇಳಿದ ನಂತರ ನನಗೆ ನಿರಾಳವಾಯಿತು ಮತ್ತು ಜಮಾಅತ್ತಿನ ಸದಸ್ಯರೂ ಕೂ ಖಲೀಫರೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಿದ್ದಾರೆ ಎಂಬ ಅಂಶದಿಂದ ನನಗೆ ನಿರಾಳವಾಯಿತು ಎಂದು ಅವಳು ಹೇಳುತ್ತಾಳೆ. ಆಕ್ಷೇಪಣೆಗಳನ್ನು ಹುಟ್ಟುಹಾಕುವ ಕೆಲವು ವಿಷಯಗಳನ್ನು ನೀವು ಹೇಳಿದ್ದೀರಿ ಎಂದು ಕೆಲವರು ಹೇಳುತ್ತಾರೆ. ವಿಶೇಷವಾಗಿ ಮಹಿಳೆಯನ್ನು ಹೊಡೆಯುವ ಪ್ರಶ್ನೆಗೆ ಬಂದಾಗ, ವಿವರಣೆಯು ಉದ್ಧವಾಗಿದೆ ಮತ್ತು ಇದು ಪ್ರತ್ಯೇಕ ವಿಷಯವಾಗಿದೆ ಮತ್ತು ಷರತ್ತುಗಳನ್ನು ಪೂರೈಸಲಾಗುವುದಿಲ್ಲ. ಮತ್ತು ಈ ಷರತ್ತುಗಳನ್ನು ಪೂರೈಸಿದರೆ, ಮಹಿಳೆಯನ್ನು ಹೊಡೆಯುವ ಪ್ರಶ್ನೆಗೆ ಸಂಬಂಧಿಸಿದಂತೆ, ಈ ಷರತ್ತುಗಳನ್ನು ಪೂರೈಸುವವರೆಗೆ, ಹೊಡೆಯುವ ಸಂದರ್ಭ ಉದ್ಭವಿಸುವುದಿಲ್ಲ ಎಂಬ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ, ಇಸ್ಲಾಂ ಕಲಿಸಿದ ಬೋಧನೆಗಳು ಬಹಳ ದೂರದ ಸಾಧ್ಯತೆ ಇದೆ.

ಓರ್ವ ಅರಬ್ ಮಹಿಳೆ ಸ್ವೀಡನ್‌ನಿಂದ ಇಲ್ಲಿಗೆ ಬಂದಿದ್ದರು. ಅವರು ಹೇಳುತ್ತಾರೆ: ಜಲ್ಸ ಸಾಲಾನವು ಇಡೀ ಕುಟುಂಬವನ್ನು ಒಳಗೊಳ್ಳುವ ದೊಡ್ಡ ಮನೆಯಂತಿದೆ. ಸ್ವೀಡನ್‌ನಲ್ಲಿ ಬಹಳ ಕಡಿಮೆ ಅರಬ್ ಅಹ್ಮದಿಗಳು ಇದ್ದಾರೆ, ಆದರೆ ಜಲ್ಸ ಸಾಲಾನದಲ್ಲಿ ಅರಬ್ ಡೇರೆಯ ಹೆಸರನ್ನು ಕೇಳಿದಾಗ, ಒಂದು ವಿಚಿತ್ರವಾದ ಸಾಂತ್ವನ ಮತ್ತು ಅನ್ಯೋನ್ಯತೆಯ ಭಾವನೆ ಉಂಟಾಗುತ್ತದೆ. ನಂತರ ನಾನು ಇತರ ಅರಬ್ ಸಹೋದರಿಯರು ಮತ್ತು ಸಹೋದರರನ್ನು ಭೇಟಿಯಾಗಲು ತುಂಬಾ ಸಂತೋಷಪಟ್ಟೆ ಮತ್ತು ಅದು ನನ್ನ ಮೇಲೆ ದೊಡ್ಡ ಪ್ರಭಾವ ಬೀರಿತು. ನಾನು ಖಲೀಫರನ್ನು ಭೇಟಿಯಾದೆ, ಅದು ಉತ್ತಮ ಪರಿಣಾಮ ಬೀರಿತು.

ಸರ್ವಶಕ್ತನಾದ ಅಲ್ಲಾಹನು ಭಾಗವಹಿಸಿದ ಎಲ್ಲ ಅತಿಥಿಗಳ ಹೃದಯಗಳನ್ನು ಮತ್ತಷ್ಟು ತೆರೆಯಲಿ ಹಾಗೂ ಅವರು ಅಹ್ಮದಿಯ್ಯತ್ ಮತ್ತು ನಿಜವಾದ ಇಸ್ಲಾಮನ್ನು ಅರ್ಥಮಾಡಿಕೊಳ್ಳುವವರಾಗಲಿ, ಕಾಲಘಟ್ಟದ ಇಮಾಮನ್ನು ನಂಬುವವರಾಗಲಿ. ನವ ಅಹ್ಮದಿಯರ ನಂಬಿಕೆ ಮತ್ತು ನಿಷ್ಠೆ ವರ್ಧಿಸಲಿ. ಅದೇ ರೀತಿ, ಪ್ರತಿಯೊಬ್ಬ ಅಹ್ಮದಿಗೂ ಜಲ್ಸದ ಕಾರ್ಯಕ್ರಮಗಳಲ್ಲಿ ತಾವು ನೋಡಿದ ಮತ್ತು ಆಲಿಸಿದ ಸಂಗತಿಗಳ ಪ್ರಕಾರ ನಡೆಯಲು, ತಮ್ಮ ಜೀವನದ ಭಾಗವಾಗಿಸಿಕೊಳ್ಳಲು, ದೀನಿಗೆ ಲೌಕಿಕತೆಗಿಂತ ಆದ್ಯತೆ ನೀಡುವಂತಾಗಲು ಮತ್ತು ಈ ಆವೇಶ ಯಾವಾಗಲೂ ನೆಲೆನಿಲ್ಲುವಂತಾಗಲು ಅಲ್ಲಾಹನು ಸೌಭಾಗ್ಯ ನೀಡಲಿ. ಜಲ್ಸದ ಅನುಗ್ರಹಗಳಿಂದ ಪ್ರತಿಯೊಬ್ಬ ಅಹ್ಮದಿ ಯಾವಾಗಲೂ ಪಾಲು ಪಡೆಯುವಂತಾಗಲಿ ಹಾಗೂ ತಮ್ಮ ಆತ್ಮ ಮತ್ತು ತಮ್ಮ ಪರಿಸರವನ್ನು ಸುಧಾರಿಸಲು ಸಹ ಪೂರ್ಣ ಪ್ರಯತ್ನ ಮಾಡುವವರಾಗಲಿ.

ಈ ಬಗ್ಗೆ ಪತ್ರಿಕಾ ವರದಿಯನ್ನು ಸಹ ನೀಡುತ್ತೇನೆ. ಇಟಾಲಿಯನ್ ಪತ್ರಿಕಾ ವರದಿಯಲ್ಲಿ ವರದಿಗಳನ್ನು ಪ್ರಕಟಿಸಲಾಗಿದೆ ಮತ್ತು ಈ ಜಲ್ಸ ಸಾಲಾನದ ಕೆಲವು ಪ್ರಮುಖ ಅಧಿವೇಶನಗಳನ್ನು ಯುರೋಪಿಯನ್ ಪಾರ್ಲಿಮೆಂಟ್‌ನ ಅಧಿಕೃತ ಪತ್ರಿಕಾ ಸಂಸ್ಥೆಯಾದ ಯುರೋಕಮ್ಯುನಿಕಾಜಿಯೋನ್ ಸುದ್ದಿ ಸಂಸ್ಥೆ ನೇರ ಪ್ರಸಾರ ಮಾಡಿದೆ ಮತ್ತು ವಿವಿಧ ಸಂದರ್ಶನಗಳನ್ನು ಪ್ರಸಾರ ಮಾಡಿದೆ ಮತ್ತು ಪ್ರಕಟಿಸಲಾಗಿದೆ ಎಂದು ಹೇಳಲಾಗುತ್ತದೆ. ಇಲ್ಲಿಯವರೆಗೆ, ಜಲ್ಸದ ಕುರಿತು ಸುದ್ದಿ ಮತ್ತು ವರದಿಗಳನ್ನು ಅರವತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ ಮತ್ತು ಇತರ ಸುದ್ದಿ ಸಂಸ್ಥೆಗಳು ಮತ್ತು ಆನ್‌ಲೈನ್ ಪ್ರಭಾವಿಗಳು ಸಹ ಅದರಲ್ಲಿ ಸಂದೇಶವನ್ನು ನೀಡಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಸುಮಾರು ಅರ್ಧ ಮಿಲಿಯನ್ ಅನುಯಾಯಿಗಳನ್ನು ಹೊಂದಿರುವ ಇಟಲಿಯ ಇಬ್ಬರು ಪತ್ರಕರ್ತರು ಜಮಾಅತ್ ಬಗ್ಗೆ ಸಕಾರಾತ್ಮಕವಾಗಿ ವರದಿ ಮಾಡಿದ್ದಾರೆ.

ಜಮಾಅತಿನ ಪ್ರೆಸ್ ಆಂಡ್ ಮೀಡಿಯಾ ವಿಭಾಗ ಮಾಡಿದ ಕೆಲಸದ ಪರಿಣಾಮವಾಗಿ, ಆನ್‌ಲೈನ್ ವೆಬ್‌ಸೈಟ್ ಅನ್ನು ಸುಮಾರು ಐವತ್ತು ಮಿಲಿಯನ್ ಜನರು ವೀಕ್ಷಿಸಿದ್ದಾರೆ. ಸುಮಾರು ನಲವತ್ತೊಂಬತ್ತು ವೆಬ್‌ಸೈಟ್‌ಗಳಿವೆ. ಪತ್ರಿಕೆಗಳು ಸೇರಿದಂತೆ ಮುದ್ರಣ ಮಾಧ್ಯಮಗಳಲ್ಲಿ ಹದಿನೇಳು ಲೇಖನಗಳು ಪ್ರಕಟವಾಗಿವೆ. ಇಪ್ಪತ್ತು ಮಿಲಿಯನ್ ಜನರು ಅದನ್ನು ವೀಕ್ಷಿಸಿದರು ಮತ್ತು ಓದಿದರು. ಇಪ್ಪತ್ತೈದು ಕಾರ್ಯಕ್ರಮಗಳನ್ನು ರೇಡಿಯೊದಲ್ಲಿ ಪ್ರಸಾರ ಮಾಡಲಾಯಿತು ಮತ್ತು ಈ ಇಪ್ಪತ್ತೈದು ಕಾರ್ಯಕ್ರಮಗಳಲ್ಲಿ ರ‍್ಯಾಲಿಯನ್ನು ಒಳಗೊಂಡಿತ್ತು ಮತ್ತು ಕೇಳುಗರ ಸಂಖ್ಯೆ ಇಪ್ಪತ್ತು ಮಿಲಿಯನ್ ಆಗಿತ್ತು. ರ‍್ಯಾಲಿಯನ್ನು ಟಿವಿಯಲ್ಲಿ ವರದಿ ಮಾಡಲಾಯಿತು. ಟಿವಿ ಚಾನೆಲ್‌ಗಳನ್ನು ಸುಮಾರು ಐದು ಮಿಲಿಯನ್ ಜನರು ವೀಕ್ಷಿಸಿದರು. ಅದೇ ರೀತಿ, ಮಾಧ್ಯಮಗಳು, ಪತ್ರಕರ್ತರು ಮತ್ತು ಸಾರ್ವಜನಿಕ ವ್ಯಕ್ತಿಗಳು ಸಾಮಾಜಿಕ ಮಾಧ್ಯಮದಲ್ಲಿ ಇದರ ಬಗ್ಗೆ ಬಹಳಷ್ಟು ಬರೆದರು ಮತ್ತು ಈ ಸುದ್ದಿ ಸಾಮಾಜಿಕ ಮಾಧ್ಯಮದ ಮೂಲಕ ಹದಿನಾಲ್ಕು ಮಿಲಿಯನ್ ಜನರನ್ನು ತಲುಪಿತು.

ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ, ನಾವು ಅವೆಲ್ಲವನ್ನೂ ಒಟ್ಟುಗೂಡಿಸಿದರೆ, ಈ ಸುದ್ದಿ ಸುಮಾರು ನೂರು ಮಿಲಿಯನ್ ಜನರನ್ನು ತಲುಪಿತು. ಪ್ರಸಿದ್ಧ ಮಾಧ್ಯಮಗಳಲ್ಲಿ ಐಟಿವಿ. ಎಲ್‌ಬಿಸಿ. ದಿ ಟೈಮ್ಸ್. ದಿ ಗಾರ್ಡಿಯನ್. ಟೆಲಿಗ್ರಾಫ್. ಡೈಲಿ ಮೇಲ್. ಇಂಡಿಪೆಂಡೆಂಟ್. ಬಿಬಿಸಿ. ಅಲ್ ಅರಬಿ ಟ್ವೆಂಟಿ ಒನ್. ಡೈಲಿ ಎಕ್ಸ್‌ಪ್ರೆಸ್. ಲಂಡನ್ ಈವ್ನಿಂಗ್ ಸ್ಟ್ಯಾಂಡರ್ಡ್. ದಿ ನ್ಯೂ ಅರಬ್ ಸೇರಿವೆ ಮತ್ತು ಸುದ್ದಿಯನ್ನು ತಲುಪಿದ ಇತರ ಹಲವು ಮಾಧ್ಯಮಗಳಿವೆ.

ನನ್ನ ಭಾಷಣಗಳನ್ನು MTA ಆಫ್ರಿಕಾದಾದ್ಯಂತ ವಿವಿಧ ಚಾನೆಲ್‌ಗಳಲ್ಲಿ ಪ್ರಸಾರ ಮಾಡಲಾಯಿತು ಮತ್ತು ಜಲ್ಸ ಸಾಲಾನದ ಪ್ರಸಾರವನ್ನು ವೀಕ್ಷಿಸಿದ ನಂತರ ಐವತ್ತಕ್ಕೂ ಹೆಚ್ಚು ಸ್ನೇಹಿತರು ಸಹ ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರಿದರು. ಜಲ್ಸ ಸಾಲಾನವನ್ನು ಇಪ್ಪತ್ತೆರಡು ರಾಷ್ಟ್ರೀಯ ಮತ್ತು ಪ್ರಾದೇಶಿಕ ಟಿವಿ ಚಾನೆಲ್‌ಗಳಲ್ಲಿ ಪ್ರಸಾರ ಮಾಡಲಾಯಿತು. ಮುನ್ನೂರ ನಾಲ್ಕು ಗಂಟೆಗಳ ಪ್ರಸಾರ ಮಾಡಲಾಯಿತು. ಸಂದೇಶವು ಅರವತ್ತೈದು ಮಿಲಿಯನ್ ಜನರನ್ನು ತಲುಪಿತು. ಜಲ್ಸಕ್ಕೆ ಸಂಬಂಧಿಸಿದ ರೇಡಿಯೋ ಕೇಂದ್ರಗಳಲ್ಲಿ ತೊಂಬತ್ತೊಂದು ವಿಭಿನ್ನ ವರದಿಗಳನ್ನು ಪ್ರಸಾರ ಮಾಡಲಾಯಿತು. ಈ ಮೂಲದ ಮೂಲಕ ಸಂದೇಶವು ಹದಿನಾರು ಮಿಲಿಯನ್ ಜನರನ್ನು ತಲುಪಿತು ಮತ್ತು ನಲವತ್ತೇಳು ವರದಿಗಳನ್ನು ವಿವಿಧ ಮಾಧ್ಯಮಗಳ ಮೂಲಕ ಪ್ರಸಾರ ಮಾಡಲಾಯಿತು ಮತ್ತು ಸಂದೇಶವು ನೂರ ಐವತ್ತು ಮಿಲಿಯನ್ ಜನರನ್ನು ತಲುಪಿತು ಎಂದು ಹೇಳಲಾಗುತ್ತದೆ.

MTA ಆಫ್ರಿಕಾದ ಅನಿಸಿಕೆಗಳೇನೆಂದರೆ: ಮಾಲಿ ಪ್ರದೇಶದ ಓರ್ವ ಮುಬಲ್ಲಿಗ್ ಸಾಹಿಬ್ ಬರೆದಿದ್ದಾರೆ: ಜಲ್ಸದ ಮೂರನೇ ದಿನದಂದು ಒಂದು ಆಧ್ಯಾತ್ಮಿಕ ದರ್ಶನವನ್ನು ಕಾಣಿಸಿತು. ಅವರು ಹೇಳುತ್ತಾರೆ: ಬೆಳಿಗ್ಗಿನಿಂದ ಬಹಳ ಭಾರೀ ಮಳೆಯಾಗುತ್ತಿತ್ತು. ಇಂದು ಯಾರೂ ಮಸೀದಿಗೆ ಬರುವುದಿಲ್ಲ ಎಂದು ತೋರುತ್ತಿತ್ತು, ಆದರೆ ಜಾಗತಿಕ ಬೈಅತ್ ಸಮಾರಂಭಕ್ಕೆ ಸ್ವಲ್ಪ ಮೊದಲು, ಕೆಲವು ನವ ಅಹ್ಮದಿಯರು ಸೇರಿದಂತೆ ಕೆಲವು ಸ್ನೇಹಿತರು ಮಳೆಯಲ್ಲಿ ಕಾಲ್ನಡಿಗೆಯಲ್ಲಿ ಅಥವಾ ಸೈಕಲ್‌ನಲ್ಲಿ ಮಸೀದಿಗೆ ತಲುಪಿದರು. ಅವರು ಸಂಪೂರ್ಣವಾಗಿ ತೋಯ್ದಿದ್ದರು. ಆದ್ದರಿಂದ ಮುಬಲ್ಲಿಗ್ ಸಾಹೇಬರು ಅವರಿಗೆ ರೇಡಿಯೊದಲ್ಲಿ ಮನೆಯಲ್ಲಿ ಕುಳಿತು ಇದನ್ನೆಲ್ಲಾ ಕೇಳಬಹುದಿತ್ತು ಎಂದು ಹೇಳಿದರು. ನವ ಅಹ್ಮದಿಯರಲ್ಲಿ ಒಬ್ಬ ವ್ಯಕ್ತಿ ಹೇಳಿದರು, ನಾವು ಮನೆಯಲ್ಲಿಯೇ ಕುಳಿತು ಕೇಲಬಹುದಾಗಿತ್ತು ಆದರೆ ಕಾಲದ ಖಲೀಫರನ್ನು ನಮ್ಮ ಸ್ವಂತ ಕಣ್ಣುಗಳಿಂದ ನೋಡಲು ಸಾಧ್ಯವಾಗುತ್ತಿರಲಿಲ್ಲ, ಮತ್ತು ಅದರಲ್ಲಿರುವ ಸಂತೋಷ ಬೇರೆ ಯಾವುದರಲ್ಲೂ ಇಲ್ಲ, ಮತ್ತು ನಾವು ಜಾಗತಿಕ ಬೈಅತ್ ಸಮಾರಂಭದ ದಿವ್ಯ ಪ್ರಕಾಶ ಮತ್ತು ಅನುಗ್ರಹಗಳನ್ನು ಕಳೆದುಕೊಳ್ಳಲು ನಾನು ಬಯಸಲಿಲ್ಲ, ಆದ್ದರಿಂದ ನಾನು ಮಳೆಯಲ್ಲಿ ಒದ್ದೆಯಾಗುತ್ತಿರುವಾಗಲೂ ಮಸೀದಿಗೆ ಬಂದೆ. ಸರ್ವಶಕ್ತನಾದ ಅಲ್ಲಾಹನು ಅವರೆಲ್ಲರ ನಂಬಿಕೆ ಮತ್ತು ವಿಶ್ವಾಸನ್ನು ವರ್ಧಿಸುವುದನ್ನು ಮುಂದುವರಿಸಲಿ.

ನಮಾಝಿನ ನಂತರ, ನಾನು ಒಂದು ಜನಾಝು ಗ್ಹಾಯಿಬ್ ನಿರ್ವಹಿಸುವೆನು. ಇದು ಗಾಝಾದ ಗೌರವಾನ್ವಿತ ಅಬ್ದುಲ್ ಕರೀಮ್ ಜಮಾಲ್ ಜೌದಾ ಸಾಹಿಬ್ ಅವರದ್ದಾಗಿದೆ. ಅವರು ಕೆಲವು ದಿನಗಳ ಹಿಂದೆ ಇಸ್ರೇಲಿ ಸೈನ್ಯದ ಗುಂಡಿನ ದಾಳಿಯಲ್ಲಿ ಹುತಾತ್ಮರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಮೃತನ ಸಹೋದರರು ಹೇಳುತ್ತಾರೆ: ಅವರಿಗೆ ನಲವತ್ತೈದು ವರ್ಷ ವಯಸ್ಸಾಗಿತ್ತು. ಅವನಿಗೆ ವಿವಾಹವಾಗಿತ್ತು. ಅವರಿಗೆ ನಾಲ್ಕು ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದರು. ಹಿರಿಯ ಮಗನಿಗೆ ಹದಿನಾರು ವರ್ಷ. ಕಿರಿಯವನಿಗೆ ಎರಡೂವರೆ ವರ್ಷ. ಅವರು ಗಾಝಾ ಪಟ್ಟಿಯ ಜಬಾಲಿಯಾ ಪ್ರದೇಶದಲ್ಲಿ ವಾಸಿಸುತ್ತಿದ್ದರು. ಅವರು ಸಂಪ್ರದಾಯವಾದಿ ಮುಸ್ಲಿಂ ಕುಟುಂಬದಲ್ಲಿ ಬೆಳೆದರು. ಹನ್ನೊಂದನೇ ತರಗತಿಯ ನಂತರ, ಮನೆಯ ವೆಚ್ಚಗಳಿಗೆ ಸಹಾಯ ಮಾಡಲು ಅವರು ತಮ್ಮ ತಂದೆಯೊಂದಿಗೆ ಕಟ್ಟಡ ನಿರ್ಮಾಣ ಕೆಲಸದಲ್ಲಿ ಸೇರಿಕೊಂಡರು. ಅವರು ಹನ್ನೊಂದು ಒಡಹುಟ್ಟಿದವರಲ್ಲಿ ಎರಡನೆಯವರಾಗಿದ್ದರು, ಮತ್ತು ನಂತರ ಅವರು ಲೋಹದ ಕಾರ್ಯಾಗಾರವನ್ನು ಸಹ ತೆರೆದರು, ಅದು ಇಸ್ರೇಲಿ ದಾಳಿಯಿಂದ ನಾಶವಾಯಿತು. 2013 ರಲ್ಲಿ, ಅವರ ಸಹೋದರನ ಮೂಲಕ ಅವರಿಗೆ ಜಮಾಅತ್ತಿನ ಪರಿಚಯವಾಯಿತು. ಆ ಸಮಯದಲ್ಲಿ, ಅವರು ಬೈಅತ್ ಮಾಡಿ ಜಮಾಅತ್ತಿನಲ್ಲಿ ಸೇರಿದರು. ಅವರು ಜಮಾಅತ್ತಿನೊಂದಿಗೆ ನಿರಂತರ ಸಂಪರ್ಕದಲ್ಲಿದ್ದರು. ಅವರು ತುಂಬಾ ಸಕ್ರಿಯ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಜಮಾಅತ್ತಿನೊಂದಿಗಿನ ಅವರ ಸಂಬಂಧದಿಂದಾಗಿ, ಗಾಝಾ ಭದ್ರತಾ ಸಂಸ್ಥೆಗಳು ಅವರನ್ನು ಹಲವು ಬಾರಿ ಪ್ರಶ್ನಿಸಿದವು ಮತ್ತು ಅವರು ಅನೇಕ ರೀತಿಯ ತನಿಖೆಗಳನ್ನು ಎದುರಿಸಿದರು, ಆದರೆ ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಲಿಲ್ಲ. ಅವರು ಜಮಾಅತ್ತಿನಿಂದ ಹಿಂದೆ ಸರಿಯಲಿಲ್ಲ. ಅವರು ಜಮಾಅತ್ತಿನೊಂದಿಗೆ ಸಂಪರ್ಕ ಸಾಧಿಸುವುದನ್ನು ಮತ್ತು ಸಂಬಂಧ ಹೊಂದುವುದನ್ನು ಮುಂದುವರೆಸಿದರು.

2025 ರಲ್ಲಿ, ಆಕ್ರಮಿತ ಪಡೆಗಳು ಅವರ ಮನೆಯನ್ನು ಕೆಡವಿದವು. ಅದರ ನಂತರ, ಅವರು ಬಾಡಿಗೆ ಮನೆಯಲ್ಲಿ ವಾಸಿಸಲು ಪ್ರಾರಂಭಿಸಿದರು. ನಂತರ, ಗಾಝಾ ಪಟ್ಟಿಯಲ್ಲಿ ಇತ್ತೀಚೆಗೆ ಸಂಭವಿಸಿದ ಕ್ಷಾಮದ ನಂತರ, ಮೃತರು ಪರಿಹಾರ ಸಾಮಗ್ರಿಗಳ ವಿತರಣಾ ಸ್ಥಳಕ್ಕೆ ಹೋದರು. ಅಲ್ಲಿ, ಸೈನ್ಯವು ಹಿಟ್ಟು ಇತ್ಯಾದಿ ಸೇರಿದಂತೆ ಪರಿಹಾರ ಸಾಮಗ್ರಿಗಳನ್ನು ಪ್ರವೇಶಿಸಲು ಅವಕಾಶ ಮಾಡಿಕೊಟ್ಟಿತು, ಆದ್ದರಿಂದ ಜನಸಮೂಹ ಜಮಾಯಿಸಿತು. ಮತ್ತು ಅವರು ಇಸ್ರೇಲಿ ಸೈನ್ಯದ ಬಳಿಯ ಅನೇಕ ಪ್ರದೇಶಗಳನ್ನು ತಲುಪಿದರು. ಇಸ್ರೇಲಿ ಸೈನ್ಯವು ನಿರಾಯುಧ ಜನರ ಗುಂಪಿನ ಮೇಲೆ ಭಾರೀ ಗುಂಡು ಹಾರಿಸಿತು, ಅದಕ್ಕಾಗಿಯೇ ನನ್ನ ಸಹೋದರನ ಬಳಿಯಿದ್ದ ವ್ಯಕ್ತಿಯೊಬ್ಬರು ಗಾಯಗೊಂಡನು ಮತ್ತು ನನ್ನ ಸಹೋದರ ಅವನಿಗೆ ಸಹಾಯ ಮಾಡಲು ಪ್ರಯತ್ನಿಸುತ್ತಿರುವಾಗ ಅದೇ ಸಮಯದಲ್ಲಿ ನನ್ನ ಸಹೋದರನ ಎದೆಗೆ ಗುಂಡು ತಗುಲಿ ಅವರು ಸ್ಥಳದಲ್ಲೇ ಸಾವನ್ನಪ್ಪಿದರು. ಗಾಯಗೊಂಡ ವ್ಯಕ್ತಿಗೆ ಸಹಾಯ ಮಾಡುತ್ತಿದ್ದ ನನ್ನ ಸಹೋದರ ಸ್ವತಃ ಹುತಾತ್ಮನಾದನೆಂದು ಹೇಳಲಾಗುತ್ತದೆ, ನನ್ನ ಸಹೋದರ ಹುತಾತ್ಮರಾಗುವ ಮೊದಲು ಮೂರು ಬಾರಿ ಕಲಿಮಾವನ್ನು ಪಠಿಸಿದರು ಮತ್ತು ಹಝ್ರತ್ ಪೈಗಂಬರ್(ಸ) ಮತ್ತು ಪ್ರವಾದಿಗಳ ಸುನ್ನತ್‌ನಲ್ಲಿ ನಿಧನರಾದರು. ಅವರು ಸಯ್ಯಿದುನಾ ಮುಹಮ್ಮದ್(ಸ) ರ ಧರ್ಮವನ್ನು ಮತ್ತು ಇಮಾಮ್ ಮಹ್ದಿ(ಅ.ಸ) ರವರಿಗೆ ಬೈಅತ್ ಅನ್ನು ಪಾಲಿಸುತ್ತಾ ನಿಧನರಾದರು ಎಂದು ನಮಗೆ ಸಮಾಧಾನವಾಗಿದೆ. ಅಲ್ಲಾಹನ ಕೃಪೆಯಿಂದ ಅವರು ಪ್ರಾಮಾಣಿಕ ಮತ್ತು ಸತ್ಯವಂತ ಜನರಲ್ಲಿ ಒಬ್ಬರು.

ಡಾ. ಹಫೀಝ್ ಸಾಹಿಬ್ ಹ್ಯುಮಾನಿಟಿ ಫಸ್ಟ್ ಯುಕೆಯ ಉಸ್ತುವಾರಿ ವಹಿಸಿದ್ದಾರೆ. ಅವರು ಹೇಳುತ್ತಾರೆ, ನಾನು ನವೆಂಬರ್ 2021 ರಲ್ಲಿ ಜಮಾಅತ್ತಿನ ಪರಿಶೀಲನೆಗಾಗಿ ಹ್ಯುಮಾನಿಟಿ ಫಸ್ಟ್ ಭೇಟಿಯ ಭಾಗವಾಗಿ ಗಾಝಾಗೆ ಹೋದಾಗ, ನಾನು ಅಬ್ದುಲ್ ಕರೀಮ್ ಸಾಹಿಬ್ ಅವರನ್ನು ಅಲ್ಲಿ ಭೇಟಿಯಾದೆ. ಅವರು ತುಂಬಾ ಪ್ರಾಮಾಣಿಕ ಮತ್ತು ಶ್ರದ್ಧಾಭರಿತ ಅಹ್ಮದಿ ಮುಸ್ಲಿಂ ಎಂದು ನಾನು ಕಂಡುಕೊಂಡೆ. ಸರ್ವಶಕ್ತನಾದ ಅಲ್ಲಾಹನು ಅವರ ಪದವಿಯನ್ನು ಉನ್ನತೀಕರಿಸಲಿ ಮತ್ತು ಅವರ ಮಕ್ಕಳನ್ನು ಅವನ ರಕ್ಷಣೆಯಲ್ಲಿ ಇಡಲಿ.

**(ಅಲ್-ಫಝಲ್ ಇಂಟರ್ನ್ಯಾಷನಲ್ 22 ಆಗಸ್ಟ್ 2025, ಪುಟಗಳು 2 ರಿಂದ 8)**

-------------*****-------------


**MUSLIM TELEVISION AHMADIYYA INTERNATIONAL**
**www.mta.tv**


**ಅಂತಿಮ ವಿಜಯ**

ಹಝ್ರತ್ ಮಸೀಹ್ ಮವ್‌ಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: ಪ್ರಾಯಶಃ ಕೊನೆಗೆ ಕ್ರೈಸ್ತ ಧರ್ಮ ಲೋಕದಾದ್ಯಂತ ವ್ಯಾಪಿಸುವುದೆಂದು ಅಥವಾ ಬೌದ್ಧ ಧರ್ಮ ಲೋಕವನ್ನೆಲ್ಲ ಆವರಿಸುವುದೆಂದು ಭೂಲೋಕದ ಜನರು ಆಲೋಚಿಸುತ್ತಿರಬಹುದು. ಆದರೆ ಅವರ ಈ ಯೋಚನೆ ತಪ್ಪಾಗಿದೆ. ಆಕಾಶದಲ್ಲಿ ದೇವನಿಂದ ನಿರ್ಧರಿಸಲ್ಪಡುವವರೆಗೆ ಯಾವುದೇ ಕಾರ್ಯವು ಭೂಮಿಯಲ್ಲಿ ಸಂಭವಿಸಲಾರದು. ಅಂತಿಮವಾಗಿ ಇಸ್ಲಾಮ್ ಧರ್ಮ ಜನರ ಹೃದಯಗಳನ್ನು ಜಯಿಸುವುದು ಎಂದು ಆಕಾಶ ಭೂಮಿಗಳ ಅಧಿಪತಿಯಾದ ದೇವನು ನನಗೆ ತಿಳಿಸಿರುವನು.

**(ಬರಾಹೀನೆ ಅಹ್ಮದಿಯಾ, ಭಾಗ 5; ರೂಹಾನೀ ಖಝಾಇನ್ ಸಂಪುಟ 21, ಪುಟ 427)**

**ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತಿಮಾ 2025 ನಡೆಯುವ ದಿನಾಂಕಗಳು**

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತಿಮಾ) 24, 25 ಮತ್ತು 26ನೇ ಅಕ್ಟೋಬರ್ 2025 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತಿಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತಿಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**


**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.06, Thursday, 02 October 2025, Issue No. 40

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## MTA ಇಂಟರ್ನ್ಯಾಷನಲ್ ಇಂಡಿಯಾ ಸ್ಟುಡಿಯೋಸ್ ಪ್ರಸ್ತುತಪಡಿಸುತ್ತದೆ
## "ಐತಿಹಾಸಿಕ ಕಾರ್ಯಕ್ರಮಗಳು"

ಅಹ್ಮದಿಯಾ ಜಮಾಅತ್ತಿನ ಇತಿಹಾಸದಲ್ಲಿ ಸುವರ್ಣ ಘಟನೆಗಳನ್ನು ಒಳಗೊಂಡಿರುವ ಕಾರ್ಯಕ್ರಮಗಳು! MTA ಇಂಟರ್ನ್ಯಾಷನಲ್ ಇಂಡಿಯಾ ಸ್ಟುಡಿಯೋಸ್ ಅಹ್ಮದಿಯಾ ಸಮುದಾಯದ ಇತಿಹಾಸದಲ್ಲಿ ನಡೆದ ಪ್ರಮುಖ ಘಟನೆಗಳ ವಿವರಗಳನ್ನು ಪ್ರಸ್ತುತಪಡಿಸುವ ವಿಶಿಷ್ಟ ಸರಣಿಯನ್ನು ಪ್ರಸ್ತುತಪಡಿಸುತ್ತಿದೆ. ಈ ಕಾರ್ಯಕ್ರಮಗಳು ಈ ಘಟನೆಗಳು ನಡೆದ ಐತಿಹಾಸಿಕ ಸ್ಥಳಗಳ ಕುರಿತು ಮಾಡಿದ ಕಿರು ಸಾಕ್ಷ್ಯಚಿತ್ರಗಳನ್ನು ಸಹ ಒಳಗೊಂಡಿವೆ, ಇದರಿಂದ ವೀಕ್ಷಕರು ಅವು ಯಾವ ಸ್ಥಳಗಳು ಎಂದು ತಿಳಿಯಬಹುದು. ಈ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ MTA ನಲ್ಲಿ ಪ್ರಸಾರ ಮಾಡಲಾಗುತ್ತದೆ ಮತ್ತು MTA ಇಂಡಿಯಾದ YouTube ಚಾನೆಲ್‌ನಲ್ಲಿಯೂ ಲಭ್ಯವಿದೆ. ಸ್ನೇಹಿತರೇ, ನಿಮ್ಮ ಅನುಕೂಲಕ್ಕೆ ತಕ್ಕಂತೆ ಈ ಕಾರ್ಯಕ್ರಮಗಳ ಲಾಭವನ್ನು ಪಡೆದುಕೊಳ್ಳಿ ಮತ್ತು ಜಮಾಅತ್ತಿನ ಇತಿಹಾಸದೊಂದಿಗೆ ಪರಿಚಯ ಮಾಡಿಕೊಳ್ಳಿ. MTA ಯ ಅಧಿಕೃತ YouTube ಚಾನೆಲ್‌ಗೆ ಚಂದಾದಾರರಾಗಿ ಮತ್ತು WhatsApp ಚಾನೆಲ್ ಅನ್ನು ಅನುಸರಿಸಿ ಇದರಿಂದ ಪ್ರತಿಯೊಂದು ಹೊಸ ಕಾರ್ಯಕ್ರಮದ ಬಗ್ಗೆ ನಿಮಗೆ ಸಮಯೋಚಿತವಾಗಿ ತಿಳಿಸಲಾಗುತ್ತದೆ.

MTA ವಿನ ಅಧಿಕೃತ ಯೂಟ್ಯೂಬ್ ಚಾನೆಲ್

MTA ವಿನ ಅಧಿಕೃತ Whatsapp ಚಾನೆಲ್

## MTA ಇಂಟರ್ನ್ಯಾಷನಲ್ ಇಂಡಿಯಾ ಸ್ಟುಡಿಯೋಸ್‌ನಿಂದ ಒಂದು ವಿಶಿಷ್ಟ ಕೊಡುಗೆ
## "ಪುಸ್ತಕಗಳ ಪರಿಚಯ"

ರೂಹಾನಿ ಖಝ಼ಾಇನ್ ಮತ್ತು ಅನ್ವಾರ್-ಉಲ್-ಉಲೂಮ್‌ನ ಅವಲೋಕನ MTA ಇಂಟರ್ನ್ಯಾಷನಲ್ ಇಂಡಿಯಾ ಸ್ಟುಡಿಯೋಸ್, ಪುಸ್ತಕಗಳ ಪರಿಚಯಗಳನ್ನು ಒಳಗೊಂಡಿರುವ ಹೊಸ ಮಾಹಿತಿಯುಕ್ತ ಸರಣಿಯನ್ನು ಪ್ರಸ್ತುತಪಡಿಸುತ್ತಿದೆ, ಇದು ರೂಹಾನಿಖಝ಼ಾಇನ್ ಮತ್ತು ಅನ್ವಾರ್-ಉಲ್-ಉಲೂಮ್‌ನ ಪುಸ್ತಕಗಳನ್ನು ಪರಿಚಯಿಸುತ್ತದೆ. ಈ ಕಾರ್ಯಕ್ರಮಗಳು ಜ್ಞಾನ, ಆಧ್ಯಾತ್ಮಿಕತೆ ಮತ್ತು ತರಬೇತಿಯ ವಿಷಯದಲ್ಲಿ ಜಮಾಅತ್ತಿನ ಸ್ನೇಹಿತರಿಗೆ ಬಹಳ ಉಪಯುಕ್ತವಾಗಿವೆ, ಇದರ ಸಹಾಯದಿಂದ ಪುಸ್ತಕಗಳನ್ನು ಅರ್ಥಮಾಡಿಕೊಳ್ಳಲು ಸುಲಭ ಮತ್ತು ಓದುವ ಉತ್ಸಾಹವನ್ನು ಸೃಷ್ಟಿಸಲಾಗುತ್ತದೆ. ಈ ಕಾರ್ಯಕ್ರಮಗಳನ್ನು ಕಾಲಕಾಲಕ್ಕೆ MTA ನಲ್ಲಿ ಪ್ರಸಾರ ಮಾಡಲಾಗುತ್ತದೆ ಮತ್ತು MTA ಇಂಟರ್ನ್ಯಾಷನಲ್ ಇಂಡಿಯಾ ಸ್ಟುಡಿಯೋಸ್‌ನ YouTube ಚಾನೆಲ್‌ನಲ್ಲಿಯೂ ಲಭ್ಯವಿದೆ, ಅಲ್ಲಿ ಸ್ನೇಹಿತರು ತಮ್ಮ ಅನುಕೂಲಕ್ಕೆ ತಕ್ಕಂತೆ ಈ ಕಾರ್ಯಕ್ರಮಗಳಿಂದ ಪ್ರಯೋಜನ ಪಡೆಯಬಹುದು. MTA ಯ ಅಧಿಕೃತ YouTube ಚಾನೆಲ್‌ಗೆ ಚಂದಾದಾರರಾಗಿ ಮತ್ತು WhatsApp ಚಾನೆಲ್ ಅನ್ನು ಅನುಸರಿಸಿ ಇದರಿಂದ ಪ್ರತಿಯೊಂದು ಹೊಸ ಕಾರ್ಯಕ್ರಮದ ಬಗ್ಗೆ ನಿಮಗೆ ಸಮಯೋಚಿತವಾಗಿ ತಿಳಿಸಲಾಗುತ್ತದೆ.

MTA ವಿನ ಅಧಿಕೃತ ಯೂಟ್ಯೂಬ್ ಚಾನೆಲ್

MTA ವಿನ ಅಧಿಕೃತ Whatsapp ಚಾನೆಲ್

## ಬದ್ರ್ ಪತ್ರಿಕೆಯನ್ನು ನೀವೂ ಓದಿರಿ ಮತ್ತು ನಿಮ್ಮ ಸ್ನೇಹಿತರನ್ನೂ ಓದಲು ಪ್ರೋತ್ಸಾಹಿಸಿ.

ಡಿಸೆಂಬರ್ 2014 ರ ಬದರ್ ಪತ್ರಿಕೆಯ ವಿಶೇಷ ಸಂಚಿಕೆಗಾಗಿ ತಮ್ಮ ಸಂದೇಶವನ್ನು ಕಳುಹಿಸುತ್ತಾ ಸಯ್ಯಿದುನಾ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಹೀಗೆ ಹೇಳಿದರು:

"ಬದರ್ ವಾರಪತ್ರಿಕೆಯ ಸಂಸ್ಥೆ ಮತ್ತು ಓದುಗರು ಈ ಪತ್ರಿಕೆಯನ್ನು ಜಮಾಅತ್‌ನ ಸದಸ್ಯರ ಆಧ್ಯಾತ್ಮಿಕ ಸುಧಾರಣೆ ಮತ್ತು ಅಭಿವೃದ್ಧಿಗಾಗಿ ಪ್ರಕಟಿಸಲಾಗಿದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು ಮತ್ತು ನಮ್ಮ ಹಿರಿಯರು ಪ್ರತಿಕೂಲ ಪರಿಸ್ಥಿತಿಗಳ ಹೊರತಾಗಿಯೂ ಅದನ್ನು ತಮ್ಮ ಎಲ್ಲಾ ಶಕ್ತಿಯಿಂದ ಮುಂದುವರಿಸಲು ಪ್ರಯತ್ನಿಸಿದರು ಮತ್ತು ಅವರ ಪ್ರಾರ್ಥನೆ ಮತ್ತು ಶುದ್ಧ ಪ್ರಯತ್ನಗಳ ಅನುಗ್ರಹಗಳಿಂದ ಮಾತ್ರ ಇದು ಇಂದಿಗೂ ಮುಂದುವರೆದಿದೆ ಮತ್ತು ಇದು ಸಾಧ್ಯವಾದಷ್ಟು ಅಹ್ಮದೀಯರು ಇದನ್ನು ಓದಬೇಕು ಮತ್ತು ಅದರಿಂದ ಪ್ರಯೋಜನ ಪಡೆಯಬೇಕು. ಸರ್ವಶಕ್ತನಾದ ಅಲ್ಲಾಹನು ತನ್ನ ಕೃಪೆಯಿಂದ, ವಿಶೇಷವಾಗಿ ಭಾರತದ ಅಹ್ಮದೀಯರಿಗೆ ಮತ್ತು ಸಾಮಾನ್ಯವಾಗಿ ಪ್ರಪಂಚದ ಉಳಿದ ಭಾಗಗಳಲ್ಲಿ ವಾಸಿಸುವ ಅಹ್ಮದೀಯರಿಗೆ ಇದನ್ನು ಅಧ್ಯಯನ ಮಾಡುವ ಮತ್ತು ಅದಕ್ಕೆ ಸಂಬಂಧಿಸಿದ ಅನುಗ್ರಹಗಳನ್ನು ಪಡೆಯುವ ಸಾಮರ್ಥ್ಯವನ್ನು ನೀಡಲಿ. ಆಮೀನ್."

ಸಯ್ಯಿದುನಾ ಹಝ್ರತ್ ಅಖ್ದಸ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಪ್ರತಿ ಮನೆಯೂ ಬದರ್ ವಾರಪತ್ರಿಕೆಯನ್ನು ಓದುವುದನ್ನು ಖಚಿತಪಡಿಸಿಕೊಳ್ಳುವುದು ಬಹಳ ಮುಖ್ಯ ಎಂದು ಅಹ್ಮದಿಯಾ ಜಮಾಅತ್ತಿಗೆ ಇಲ್ಲಿ ತಿಳಿಸಲಾಗಿದೆ. ಬದರ್ ಪತ್ರಿಕೆಯಲ್ಲಿ, ಪವಿತ್ರ ಖುರ್‌ಆನ್, ಹದೀಸ್ ಶರೀಫ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು, ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ಖುತ್‌ಬ ಜುಮುಅಗಳು, ಭಾಷಣಗಳು ಮತ್ತು ಹುಝೂರ್ ಅನ್ವರ್(ಅತಬಿಅ) ಅವರ ವಿವಿಧ ದೇಶಗಳಿಗೆ ಮಾಡಿದ ಅನುಗ್ರಹದಾಯಕ ಭೇಟಿಗಳ ಕುತೂಹಲಕಾರಿ ಮತ್ತು ವಿಶ್ವಾಸವರ್ಧಕ ವರದಿಗಳನ್ನು ಬದರ್ ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಲಾಗುತ್ತದೆ, ಇದು ಪ್ರತಿಯೊಬ್ಬ ಅಹ್ಮದಿಯೂ ಓದಲೇಬೇಕಾದ ವಿಷಯವಾಗಿದೆ. ಸರ್ವಶಕ್ತನಾದ ಅಲ್ಲಾಹನ ಅನುಗ್ರಹ ಮತ್ತು ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರ ಕರುಣೆಯಿಂದ, ಈ ಪತ್ರಿಕೆಯು ಈಗ ಉರ್ದು ಬಾಷೆಯ ಜೊತೆಗೆ ಹಿಂದಿ, ಬಂಗಾಳಿ, ತಮಿಳು, ತೆಲುಗು, ಮಲಯಾಳಂ, ಒರಿಯಾ ಮತ್ತು ಕನ್ನಡ ಭಾಷೆಗಳಲ್ಲಿಯೂ ಪ್ರಕಟವಾಗುತ್ತಿದೆ. ಬದರ್ ಪತ್ರಿಕೆಗೆ ಇನ್ನೂ ಚಂದಾದಾರರಾಗದ ಅಹ್ಮದಿ ಸ್ನೇಹಿತರು ಇದಕ್ಕೆ ಚಂದಾದಾರರಾಗಲು ಮತ್ತು ಅದನ್ನು ಸ್ವತಃ ಓದಲು ಮತ್ತು ಅವರ ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರಿಗೆ ಅದನ್ನು ಓದಲು ಅವಕಾಶವನ್ನು ಒದಗಿಸುವಂತೆ ವಿನಂತಿಸಲಾಗಿದೆ. ಸಯ್ಯಿದುನಾ ಹಝ್ರತ್ ಅಮೀರುಲ್ ಮುಮಿನೀನ್(ಅತಬಿಅ) ಅವರ ಸೂಚನೆಗಳ ಮೇರೆಗೆ ಕಾರ್ಯನಿರ್ವಹಿಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್. ಬದರ್ ಪತ್ರಿಕೆ ಸಮಯಕ್ಕೆ ಸರಿಯಾಗಿ ಬರದಿದ್ದರೆ, ಅಥವಾ ದೇಣಿಗೆ ನೀಡಲು ಅಥವಾ ಯಾವುದೇ ರೀತಿಯ ಮಾಹಿತಿಗಾಗಿ, ದಯವಿಟ್ಟು ಬದರ್ ವಾರಪತ್ರಿಕೆಯ ಕಚೇರಿ ವ್ಯವಸ್ಥಾಪಕರಿಗೆ ಸಂಪರ್ಕಿಸಿ. ಜಝಾಕುಮುಲ್ಲಾಹ್ . **(ಪತ್ರಿಕಾಂಗ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.